

ಕೈಗೆ ಬಂದ ತುತ್ತು

(ಏಕಾಂಕ ಪ್ರಹಸನ)

×

ಅ. ಬಾಲುರಾವ್

ಕೈಗೆ ಬಂದ ತುತ್ತು

[ಏಕಾಂಕ ಪ್ರಹಸನ]

★

ಶಾ. ಬಾಲುರಾವ್

★

ಕನ್ನಡ-ಭಾರತೀ,
೪/೧೦, ವೆಸ್ಟರ್ನ್ ಎಕ್ಸ್‌ಟೆನ್‌ಷನ್,
ಕರೋಲ್ ಬಾಗ್, ನವದೆಹಲಿ—೫

ಪ್ರಥಮ ಮುದ್ರಣ: ೧೯೬೪

ಮೇಲುಹೊದಿಕೆಯ ಮೇಲಿನ ತಲೆಕಟ್ಟಿನ ಚಿತ್ರ
ಕಲಾವಿದ ಶ್ರೀ ಆರ್. ಎಸ್. ಎನ್. ರ ಕೃಪೆ.

ಮುದ್ರಣ: ವೆಸ್ಲಿ ಪ್ರೆಸ್, ಮೈಸೂರು.

ಬೆಲೆ: ಒಂದು ರೂಪಾಯಿ.

ರಂಗಭೂಮಿಯ ಉಜ್ಜೀವನಕ್ಕಾಗಿ ಜೀವನವನ್ನು ಮೀಸಲಿಟ್ಟ
ದೆಹಲಿಯ ಹಿಂದೂಸ್ತಾನೀ ಥಿಯೇಟರ್ಸ್‌ನ ಕನ್ನಡಿಗ

ಎಂ. ಎಸ್. ಸತ್ಯುವಿಗೆ

ಇಪ್ಪತ್ತು ವರ್ಷಗಳ ಗೆಳೆತನದ ಗುರುತಾಗಿ
ಈ ಅಲ್ಪಕೃತಿಯ ಕಾಣಿಕೆ.

ಪಾತ್ರಗಳು

ಗುಂಡಪ್ಪ—ಸುಮಾರು ೪೦-೪೫ ವರ್ಷಗಳ ಮಧ್ಯ ವಯಸ್ಸಿನ, ಮಧ್ಯಮವರ್ಗೀಯ ಸಂಸಾರವೊಂದರ ಯಜಮಾನ. ಜೀವನದ ಕಷ್ಟಕಾರ್ಪಣ್ಯಗಳ ಹೊಗೆ-ಮನೆಯಲ್ಲಿ ಕಳಿತು ಪಕ್ವವಾಗಿದ್ದಾನೆ. ಅವನಿಗೆ ಲೋಕ ಕೊಟ್ಟ ಬಿರುದು, 'ಘಾಟಿ'; ಕೊಡಲು ಮರೆತದ್ದು, 'ಗುಳ್ಳೆ ನರಿ'.

ಸೀತಮ್ಮ—ಅವನ ಹೆಂಡತಿ. ಸ್ವಭಾವದಿಂದ ಹಸು. ಇತ್ತ ತಂದೆ, ಅತ್ತ ಗಂಡ—ಈ ಅಡಿಕೆ-ಕತ್ತರಿಯಲ್ಲಿ ಸಿಕ್ಕಿ ಹೋಳಾಗಿದ್ದಾಳೆ. ಆದರೂ ಹೊತ್ತು ಬಂದಾಗ ಓಲುವುದು ಸ್ತ್ರೀಸಹಜವಾಗಿ ಚಿನ್ನದ ಕಡೆಗೇ!

ಸುಬ್ಬು—ಇವರಿಬ್ಬರ ಏಕೈಕ ಪುತ್ರರತ್ನ, ಮುದ್ದಿನ ಕಣಿ. ವಯಸ್ಸು ೨೦-೨೨. ಅದೇ ಆಗ ಓದು ಮುಗಿಸಿ ಕಾರ್ಖಾನೆಯ ಕಟ್ಟೆ ಹತ್ತಿದ್ದಾನೆ. ಇನ್ನೂ ಹುಡುಗುತನದ ಸೊನೆ ಆರಿಲ್ಲ. ಮಿಂಚಿನ ಮಾತು, ಪಾದರಸದ ನಡಿಗೆ.

ಲಕ್ಷ್ಮೀಪತಯ್ಯ—ಸೀತಮ್ಮನ ತಂದೆ. ಮಗಳು ಅಳಿಯಂದಿರ ಮೇಲೆ ಬೇರು ಬಿಟ್ಟು ಬೆಳೆಯುತ್ತಿರುವ ೬೦-೬೫ ವರ್ಷ ವಯಸ್ಸಿನ ಬದನಿಕೆ. ಸ್ವರೂಪ ಸ್ವಭಾವಗಳೆರಡರಿಂದಲೂ ಮುದಿ ಹುಲಿ. ಕಸುಬು: ವಿಶ್ರಾಂತಿ.

ಶ್ರೀಕಂಠಶಾಸ್ತ್ರಿಗಳು—ಒಡೆ-ಪಾಯಸಗಳನ್ನು ಉಂಡು ಉಂಡು ಗುಂಡಗೆ ಬೆಳೆದ ಸುಮಾರು ೪೦ ವರ್ಷ ವಯಸ್ಸಿನ, ಶ್ರಾದ್ಧಾರ್ಪಿತವಾದ ಶ್ಯಾಮಶರೀರ·

ಕೈಗೆ ಬಂದ ತುತ್ತು

[ಏಕಾಂಕ ಪ್ರಹಸನ]

[ಸಾಧಾರಣವಾಗಿ ಯಾವ ಕನ್ನಡ ನಾಟಕವನ್ನೂ ಬಿಡದ, ಆದರೂ ಎಲ್ಲಕ್ಕೂ ಸುಲಭಸಾಧ್ಯವಾದ ರಂಗಸಜ್ಜಿಕೆ. ಅರ್ಥಾತ್ ಮೈಸೂರಿನ ಮಧ್ಯಮವರ್ಗೀಯ ಸಂಸಾರವೊಂದರ ಮುಂದಿನ ಹಜಾರ. ಅದಕ್ಕೆ ಎರಡು ಬಾಗಿಲು—ಒಂದು ಮನೆಯ ಹೊರಕ್ಕೆ ಕರೆದೊಯ್ಯುವುದು, ಇನ್ನೊಂದು ಮನೆಯ ಒಳಕ್ಕೆ. ಹಿಂದೊಂದು ಕಿಟಕಿ. ರಂಗದ ಮೇಲುಗಡೆ, ಪ್ರೇಕ್ಷಕರ ಬಲಕ್ಕೆ, ಕಿಟಕಿಯ ಮುಂದೆ ಅಡ್ಡಡ್ಡಲಾಗಿ ಒಂದು ಮಂಚ ಹಾಕಿದೆ. ಮಂಚದ ಮೇಲು ಪಟ್ಟಿಗೆ ಸೊಳ್ಳೆಪರದೆಯನ್ನು ಎತ್ತಿಕಟ್ಟಿದೆ. ಮಂಚದ ಮೇಲೆ ಮರದ ಕೊರಡನ್ನು ನೆನಪಿಗೆ ತರುವಂತೆ ಲಕ್ಷ್ಮೀಪತಯ್ಯನವರ ಮಹಾಕಾಯ ಬಿದ್ದಿದೆ. ಮೇಲೆ ಹೊಚ್ಚಹೊಸ ಕಾಶ್ಮೀರದ ಶಾಲನ್ನು ಹೊದಿಸಿದೆ.

ಮಂಚದ ಈ ಕಡೆ ತಲೆಯ ಬದಿ, ಒಂದು ಸಣ್ಣ ಸುಂದರವಾದ ಟೀಪಾಯ್ ಇದೆ. ಅದರ ಮೇಲೆ ಅರ್ಧ ತುಂಬಿದ ಕೆಂಪು ಔಷಧಿಯ ಸೀಸೆ, ಬಟ್ಟಲು ; ಪಕ್ಕದಲ್ಲಿ ಹತ್ತುಗಂಟೆ ತೋರಿಸುತ್ತಿರುವ ಅಲಾರಂ ಗಡಿಯಾರ.

ಮಂಚದ ಮುಂಬದಿಯಲ್ಲಿ ನೆಲದ ಮೇಲೆ ಒಂದು ಜತೆ ರಂಗುರಂಗಿನ ಗಿರಕಿ ಚಡಾವು. ಹಿಂದೆ, ಗೋಡೆಯ ಗೂಟಕ್ಕೆ, ಕೋಟು ಮತ್ತು ಜರಿಯ ರುಮಾಲನ್ನು ತೂಗುಹಾಕಿದೆ— ಎಲ್ಲವೂ ಮಂಚದ ಮೇಲಿನ ಹೆಬ್ಬಾವಿನದು.

ರಂಗದ ಇನ್ನೊಂದು ಬದಿ, ಪ್ರೇಕ್ಷಕರ ಎಡಕ್ಕೆ, ಹಿಂಬದಿಯ ಗೋಡೆಗೆ ಒಂದು ಕನ್ನಡಿ ತೂಗುಹಾಕಿದೆ. ಇನ್ನೂ ಮೇಲೆ, ಅದೇ ಹತ್ತುಗಂಟೆ ತೋರಿಸುತ್ತಿರುವ ಹಳೆಯ ಕಾಲದ ಗೋಡೆ-ಗಡಿಯಾರ. ಅಲ್ಲೇ ಗೋಡೆಗೆ ಹೊಂದಿಕೊಂಡಂತೆ ಒಂದು ಪುಸ್ತಕದ ಕಪಾಟು. ಅದರಲ್ಲಿ ಸಾಲುಸಾಲಾಗಿ ಜೋಡಿಸಿಟ್ಟ ಪುಸ್ತಕಗಳು. ಕಪಾಟಿನ ಪಕ್ಕದಲ್ಲಿ ಒಂದು ಬೆಂಚು. ಅದರ ಮೇಲೆ ಎತ್ತರವಾಗಿ ಪೇರಿಸಿಟ್ಟ ಹಾಸಿಗೆ ಹೊದಿಕೆಗಳು.

ಎಡಗಡೆಯ ಕೆಳರಂಗದಲ್ಲಿ 'ಒಂದಾನೊಂದು ಕಾಲ'ದ ದುಂಡುಮೇಜು, ಎರಡು ಮುರಿದ ಕುರ್ಚಿಗಳು. ಮಂಚ-ಟೀಪಾಯ್‌ಗಳ ಹೊರತು ಉಳಿದೆಲ್ಲ ರಂಗಸಾಮಗ್ರಿಗಳೂ ಹಳೆಯವು. ಅವುಗಳ ನಡುವೆ ಮಂಚ-ಟೀಪಾಯ್‌ಗಳಷ್ಟೇ ಮುಖದ ಮೇಲಿನ ಮೂಗುತಿಯಂತೆ ಥಳಥಳಿಸುತ್ತಿವೆ!

ತೆರೆ ಎದ್ದಾಗ ರಂಗದ ಮೇಲೆ 'ಜೀವಂತ' ವ್ಯಕ್ತಿಗಳು ಯಾರೂ ಇಲ್ಲ. ಎಲ್ಲವೂ ನಿಶ್ಶಬ್ದ. ಒಂದು ಕ್ಷಣ ಬಿಟ್ಟು, ಆ ನಿಶ್ಶಬ್ದತೆಯನ್ನು ಭೇದಿಸಿಕೊಂಡು ಗೋಡೆ-ಗಡಿಯಾರ ತನ್ನ ಕಟ್ಟದ ಗಂಟಲಿನಿಂದ ಹತ್ತು ಗಂಟೆ ಬಾರಿಸುತ್ತದೆ. ಮತ್ತೆ ಮೌನ. ಒಳಬಾಗಿಲಿನಿಂದ ಸೀತಮ್ಮ ಪ್ರವೇಶಿಸಿ ಹೊರಬಾಗಿಲ ಕಡೆ ಕಾಲಿಡಹೋದವಳು ಮತ್ತೆ ಹಿಂದೆ ಬಂದು, ಮಂಚದ ಮೇಲಿನ ವ್ಯಕ್ತಿಯ ಮೇಲುಹೊದಿಕೆಯನ್ನು ಸರಿಪಡಿಸಿ, ಹೊರಬಾಗಿಲಿನಿಂದ ನಿರ್ಗಮಿಸುತ್ತಾಳೆ. ಮತ್ತೆ ಇನ್ನೊಂದು ಕ್ಷಣ ಮೌನ. ನಂತರ ಸುಬ್ಬು ಒಳಬಾಗಿಲಿನಿಂದ ಕೈಯಲ್ಲಿ ಬಾಚಣಿಗೆ ಹಿಡಿದು ಪ್ರವೇಶಿಸುತ್ತಾನೆ. ಅದೇ ಆಗ ಎದ್ದು ಮುಖ ತೊಳೆದಿದ್ದಾನೆ. ತಲೆ ಒದ್ದೆಯಾಗಿ ಕೆದರಿದೆ. ಹೆಗಲ ಮೇಲೆ ಟವಲ್ಲಿದೆ. ಕನ್ನಡಿಯ ಕಡೆ ನಡೆದು, ಅದರ ಮುಂದೆ ನಿಂತು ತಲೆ ಬಾಚಿಕೊಂಡು, ರಂಗದ ಮಧ್ಯಕ್ಕೆ ಬರುತ್ತ. . .]

ಸುಬ್ಬು—(ತುಸು ಬೇಸರದ ದನಿಯಲ್ಲಿ) ಅಮ್ಮಾ . . . ಅಮ್ಮಾ. ಎಷ್ಟೊತ್ತಮ್ಮ ಕಾಫಿ ಕೊಡೋದು? (ಒಳಗಿನಿಂದ ಉತ್ತರ ಬಾರದುದನ್ನು ಕಂಡು, ಒಳಬಾಗಿಲ ಕಡೆ ನಡೆದು ಆ ಕಡೆ ಮುಖ ನೆಟ್ಟು ಕೋಪದಿಂದ ಜೋರಾಗಿ) ಅಮ್ಮಾ ಆ . . . (ಇನ್ನೂ ಉತ್ತರ ಬಾರದಿರಲು. ಅರೆತೆರೆದ ಹೊರಬಾಗಿಲ ಕಡೆ ನೋಡಿ, ತಾಯಿ ಎಲ್ಲೋ ಹೊರಗೆ ಹೋಗಿರಬೇಕೆಂದು ನಿರ್ಧರಿಸಿ) ಥೂ! ಏನ್ ಹೆಂಗಸ್ರೋಪ್ಪಾ. The unkindest of the whole mankindಉ ಅಂದ್ರೆ, ಈ womankindಉ. ಅಲ್ಲಾ, ಬೆಳಗ್ಗೆ ಎದ್ದೇಟ್ಗೆ ನಮ ಗೊಂದಿಷ್ಟು ಹೊಟ್ಟೇಗ್ ಹಾಕಿ ಹೊರಗಟ್ಟೋದ್ ಬಿಟ್ಬಿಟ್ಟು . . . ಎಲ್ಲಿ ಚಕ್ಕಂದವೊ ಎಲ್ಲಿ ಕಾಡುಹರಟೆಯೊ ನಾನ್ಸೇರೇ ಕಾಣೆ.

[ಸೀತಮ್ಮ ಕೈಯಲ್ಲಿ ಕೋಸುಂಬರಿ ಸಮೇತವಾದ ವೀಳೆಯದೆಲೆಯನ್ನು ಹಿಡಿದು ದಡದಡನೆ ಪ್ರವೇಶಿಸುತ್ತಾಳೆ. ಹಣೆಯಲ್ಲಿ ಮಾಮೂಲಿನ ಗಟ್ಟಿಕುಂಕುಮದ ಬೊಟ್ಟಿನ ಮೇಲೆ ಅವಳು ನೆರೆಮನೆಗೆ ಹೋಗಿಬಂದಿದ್ದಾಳೆಂಬುದನ್ನು ಸೂಚಿಸುವ ಇನ್ನೊಂದು ಪದರ ಹೊಸ ಪುಡಿಕುಂಕುಮ ಹತ್ತಿದೆ.]

ಸುಬ್ಬು—(ಬೇಸರದ ದನಿಯಲ್ಲಿ) ಎಲ್ಲ್ ಹಾಳಾಗ್ ಹೋಗಿದ್ಯಮ್ಮ, ಇಷ್ಟೊತ್ತು?

ಸೀತಮ್ಮ—ಇದ್ಯಾಕೋ ಮಗು ಹೀಗ್ ಕಿರಚ್ತಿದೀ. ರಾತ್ರಿ ಮಲಕ್ಕೊಳೋ ವರೆಗೂ ಅಷ್ಟು ಚೆನ್ನಾಗಿದ್ಯಲ್ಲ . . . ಇದ್ದಕ್ಕಿದ್ಹಾಗೆ, ಬೆಳಗ್ಗೆ ಎದ್ದೇಟ್ಗೆ ಹುಚ್ಗಿಚ್ಚ್ ಏನಾದ್ರೂ ಹಿಡೀತೋ ಹೇಗೇ ಅಂತಾ!

ಸುಬ್ಬು—(ಗೊಣಗುಟ್ಟುತ್ತ) ಹಿಡೀದೇ ಏನಾಗುತ್ತೆ ಅಂತ, ಹೀಗಾದ್ರೆ . . .

ಹತ್ತುಗಂಟೆಯಾದ್ರೂ ಒಂದು ತೊಟ್ಟು ಕಾಫಿಯಿಲ್ಲ, ತಿಂಡಿಯಿಲ್ಲ . . . ಹೋಗಮ್ಮಾ.

ಸೀತಮ್ಮ—ಅಂಥವನು ಏಳ್‌ಗಂಟೇಗೇ ಎದ್ದು, ಎಲ್ಲರ ಜೊತೇಲೂ ಕುಡೀಬೇಕಾಗಿತ್ತು . . . ನಾನೇನ್ ಬೇಡ ಅಂತಿದ್ನೇ?

ಸುಬ್ಬು—(ಅಣಕಿಸುತ್ತ) ಊ್ಣ . . . ಎದ್ದುಬಿಡ್ತಾರೆ, ಏಳ್‌ಗಂಟೆಗೇಯೇ. ರಾತ್ರಿಯೆಲ್ಲ 'ರಾಮಾ ಕೃಷ್ಣಾ' ಅಂತ ನೈಟ್‌ಷಿಫ್ಟ್ ಮಾಡೀ . . . ಮೂರು ಗಂಟೇಗ್ ಮಲಕ್ಕೊಂಡು . . . ಏಳ್‌ಗಂಟೇಗ್ ಎದ್ಬಿಡ್ತಾರೆ! ಅದೂ . . . ನೀನ್ ಕೊಡೋ ಹಾರ್‍ರಿಬಲ್ ಕಾಫೀ ಆಸೇಗೆ!

ಸೀತಮ್ಮ—(ಸೋತು) ಸರಿ ಬಿಡು. ಮುಳುಗ್ಹೋದ್ ಏನೀಗ? ಡಿಕಾಕ್ಷನ್ ಹಾಕಿಟ್ಟಿದೀನಿ, ಹಾಲ್ ಬಿಸೀ ಮಾಡಿ ಬೆರಸ್ಕೊಡ್ತೀನಿ. ಎರಡು ನಿಮಿಷದ ಕೆಲಸ.

ಸುಬ್ಬು—ಹೌದ್ಹೌದು! ಎರಡು ನಿಮಿಷದ ಕೆಲಸ ಅಂತಾ ಎರಡು ಗಂಟೇ ಇಂದಾ ಎಲ್ಲಿ ಹೋಗ್ ಕೂತಿದ್ದೆ? ಸಂಗ್ ಕೂಗೀ ಕೂಗೀ ಸಾಕಾಯ್ತು.

ಸೀತಮ್ಮ—ಅಯ್ಯೋ, ಎಲ್ಲೂ ಇಲ್ಲ. ಪಕ್ಕದ್ಮನೆ ಲಕ್ಷ್ಮಮ್ನೋರು, 'ಕುಂಕುಮ ಇಟ್ಕೊಂಡು ಹೋಗೋರಂತೆ, ಬನ್ನಿ' ಅಂತ ಕರದಿದ್ರು. ಸರಿ, ನೀನೂ ಇನ್ನೂ ಎದ್ದಿರ್ಲಿಲ್ಲ . . . ಅವರೂ, 'ಏನಾದ್ರೂ ತರಕಾರೀ ನೋಡ್ಬರ್‍ತೀನಿ' ಅಂತ ಹೊರಗೆ ಹೋಗಿದ್ರು . . . ನಿಮ್ಮಜ್ಜನೂ ಮಲಗಿದ್ರು . . . ಕೈಯೂ ಬಿಡುವಿತ್ತು . . . ಬೇಗ ಹೋಗಿದ್ಬಂದೆ.

ಸುಬ್ಬು—(ತಾಯಿಯ ಕೈಲಿರುವ ವೀಳೆಯದೆಲೆಯ ಕಡೆ ಕಣ್ಣು ಹರಿಸಿ, ನಯವಾದ ಕುತೂಹಲದ ದನಿಯಲ್ಲಿ) ಬರ್‍ತಾ . . . ಏನೋ ಸಂಪಾದಸ್ಕೊಂಡ್ ಬೇರೇ ಬಂದಿರೋಹಾಗಿದೆ!

ಸೀತಮ್ಮ—ಸಂಪಾದ್ನೆಯೇನ್ಬಂತು ಮಹಾ! ಎರಡು ಹಿಡಿ ಕೋಸುಂಬರೀ . . . ಮಂಗಳಗೌರೀ ಪೂಜೇದು.

ಸುಬ್ಬು—(ತಕ್ಷಣ ಚೇತನಗೊಂಡವನಂತೆ, ಕಣ್ಣಿನಲ್ಲಿ ಹಾಗೂ ಮಾತಿನಲ್ಲಿ ಹೊಳಪು ಸೂಸುತ್ತ) ಓ . . . ಕೋಸುಂಬರೀ! ಗುಡ್ ಐಡಿಯಾ ಕಣೇ ಅಮ್ಮಾ . . . ಕಾಫೀಗ್ ಮುಂಚೆ ಕೋಸುಂಬರೀ ಬ್ರೆಕ್‌ಫಸ್ಟು! (ನಾಟಕೀಯವಾಗಿ

ರಾಗವೆಳೆದು, ಕೈಬೀಸುತ್ತ) oh ! my dear, darling ಕೋಸುಂಬ್ರೀ . . . one of the oldest wonders of the kitchen-worldಉ (ಥಟ್ಟನೆ ಮೊದಲಿನ ಧ್ವನಿಗೆ ತಿರುಗಿ) ಅಮ್ಮ, ಇದರ ಜೊತೇಗೆ ಎರಡು ಮುರುಕು ಕೋಡ್ಬಳೆಯೂ ಇದ್ದಿದ್ರೆ . . . by the way . . . ಕೋಡ್ಬಳೆ and ಕೋಸುಂಬ್ರೀ are co-brothersಊ ಕಣಮ್ಮಾ . . . ಅರ್ಥಾತ್ ಷಡ್ಕಾಸು . . . ಈಗ ಅಣ್ಣಾನೂ ಕಿಟ್ಟಚಿಕ್ಕಪ್ಪಾನೂ ಇಲ್ವೇ . . . ಹಾಗೆ ! ಹಾಕು, ಇಲ್ಲಿ ನಾಲ್ಕ್ ಕಾಳು. (ಕೈ ಚಾಚುವನು.)

ಸೀತಮ್ಮ—ಬೆಳಗ್ಗೆ ಎದ್ದೇಟ್ಗೆ ಆ ಹಾಳ್ ಪರಂಗೀ ಭಾಷೇನೂ ಮಾತ್ನಾಡ್ಕೊಂಡು, ಅದೇನ್ ಹಾಗಾಡ್ತೀಯೋಪ್ಪಾ !

ಸುಬ್ಬು—ಏನ್ old-fashioned ಏ ಅಮ್ಮಾ ನೀನು . . . like the equally old-fashioned ಕೋಸುಂಬ್ರೀ as well as ಕೋಡ್ಬಳೇ ! ಆದ್ರೇನಮ್ಮಾಡ್ತಿ . . . old is goldಉ . . . full twenty-two ಕ್ಯಾರಟ್ಟು . . . ಬಿಟ್ಬಿಡೋಕ್ಕಾಗೋಲ್ಲಾ. (ಸೀತಮ್ಮ ಕೊಡದೇ ಒಳಮನೆಯ ಕಡೆ ಹೆಜ್ಜೆ ಇಡುವಳು. ಸುಬ್ಬು ಒಂದು ಕ್ಷಣ ಪೆಚ್ಚಾಗಿ, ಹಲ್ಲು ಕಿರಿಯುತ್ತ) ಹೋಗ್ಲೀ . . . ಅಚ್ಚ ಕನ್ನಡದಲ್ಲೇ ಮಾತನಾಡ್ತೀನಿ ಕೊಡಮ್ಮಾ. (ತನಗೆ ತಾನೇ) ಏನಪ್ಪಾ ? . . . kitchen-worldಉ . . . ಅಂದ್ರೆ . . . ಅಂದ್ರೆ . . . ಅಡುಗೆಯ ಮನೆಯ . . . wonders ಗೆ ಏನಪ್ಪಾ ? (ಯೋಚಿಸುತ್ತ) wonders . . . (ಹಿಂಬದಿಯ ಪುಸ್ತಕಗಳ ಕಡೆ ನೋಡುತ್ತ) ಎಲ್ಲಿ ಹೋದ್ವು ? . . . ಜೀಗ್ಲರ್ ಭಾರದ್ವಾಜ ಕಾರಂತಾದಿ ಡಿಕ್ಷನರಿಗಳು . . . ಆ್ಞ, ಹೊಳೀತು, ಹೊಳೀತು (ನಾಟಕೀಯವಾಗಿ ರಾಗವೆಳೆದು, ಕೈಬೀಸಿ, ಮೊಣಕಾಲ ಮೇಲೆ ಕೂರುತ್ತ) 'ಅಡಿಗೆಯ ಮನೆಯ ಪುರಾತನ ಅತ್ಯದ್ಭುತಗಳಲ್ಲೊಂದಾದ ಕೋಸುಂಬರಿಯನ್ನು ಕೊಡುವೆಯಾ, ಮಾತೇ ?'

ಸೀತಮ್ಮ—(ಹುಸಿನಗೆ ನಕ್ಕು, ಎರಡು ಕಾಳು ಕೈಗಿಡುತ್ತ) ಚೆನ್ನಾಗಿದೆ . . . ವಯಸ್ಸಾಗ್ತಾ ಆಗ್ತಾ !

ಸುಬ್ಬು—(ಅತೃಪ್ತಿ ಸೂಚಿಸಿ) ಹಾ . . ಕ . . ಮ್ಮ . . . ಇನ್ನೆರಡ್ ಕಾಳೂ

. . . ಯಾಕಿಷ್ಟು ಜಿಪುಣತನ ಮಾಡ್ತೀಯಾ! ಏನ್ ಬಂಗಾರದ ಬೇಳೇ ಕಾಳ್ನ ಸನೇ ಹಾಕ್ಮಾಡಿದಾರೆಯೇ, ಪಕ್ಕದ್ಮನೆಯೋರು . . . ಈ ಸಿಸ್ನ ಪ್ರೆಷಸ್ ಕೋಸುಂಬ್ರೀನಾ?

ಸೀತಮ್ಮ—ಅಯ್ಯೋ, ಅವರ್ಗೂ ಸ್ವಲ್ಪಾ ಇರಲೀ ಬಿಡು . . . ಹಾಗೇ ನಿಮ್ಮಜ್ಜನೂ ಬಂದ್ನಾಲ್ಕ್ ಕಾಳು ರುಚಿ ನೋಡ್ತಾರೋ ಏನೋ, ನೋಡೋಣ.

[ಸೀತಮ್ಮ ಒಳಮನೆಯ ಕಡೆ ಹೋಗುವಳು]

ಸುಬ್ಬು—(ತಿಂದು ಕೈ ನೆಕ್ಕುತ್ತಾ, ಧ್ವನಿ ಬದಲಾಯಿಸಿ ಜೋರಾಗಿ) ಬೇಗ ಕಾಫಿ ಬೆರಸಮ್ಮಾ . . . ಹೋಗ್ಬೇಕು, ಯಾರೋ ಫ್ರೆಂಡ್ಸ್ ಬರ್ತೀನಿ ಅಂತ ಅಂದಿದಾರೆ . . . ಇವತ್ನಿಂದ ನಮ್ಮ ಹೊಸ ನಾಟಕದ ರಿಹರ್ಸಲ್ ಷುರು.

ಸೀತಮ್ಮ—(ಒಳಬಾಗಿಲ ಹತ್ತಿರ ಹೋಗಿದ್ದವಳು, ತಿರುಗಿ ನೋಡಿ) ಹಾಗಾದ್ರೆ, ಅಷ್ಟು ಹೊತ್ತಿಗೆ ಎರಡು ಲೋಟ ಗಲಬರಿಸಿಕೊಂಡು ಬಾ . . . ಬೇಗ ಬೆರಸಿಕೊಡ್ತೀನಿ.

ಸುಬ್ಬು—(ದನಿ ಎತ್ತರಿಸಿ ಕೈ ಅಲ್ಲಾಡಿಸುತ್ತ) ಅದೆಲ್ಲಾ ನನ್ನ ಕೈಲಾಗೋಲ್ಲ . . . ನೀನೇ ಮಾಡ್ಕೋ . . .

ಸೀತಮ್ಮ—(ತಗ್ಗಿದ ದನಿಯಲ್ಲಿ) ಕಿರಚ್ಕೋಬೇಡವೋ, ಕತ್ತೇ. ನಿಮ್ಮಜ್ಜನಿಗೆ ಹುಷಾರಿಲ್ಲ . . . ಅಪರೂಪಕ್ಕೆ ನಿದ್ರೆ ಹತ್ತಿದೆ ಅಂತ ಕಾಣುತ್ತೆ. . . ಮಲಗಿದಾರೆ.

[ಸೀತಮ್ಮ ಒಳನಡೆಯುವಳು.]

ಸುಬ್ಬು—(ತಿರಸ್ಕಾರದ ದೃಷ್ಟಿಯಿಂದ ಮಂಚದ ಕಡೆ ನೋಡುತ್ತ) ಹುಷಾರಿಲ್ಲದೇ ಏನಂತೆ ಬಂದಿರೋದು ಕೇಡು? ನಾನು ಕಾಣ್ನೇ . . . ಇವರ ಮಾಮೂಲ್ನ? ಬೆಳಗ್ಗೆದ್ದೇಟ್ಗೇ ಮನೇಲಿ ಬಿಸಿಬಿಸಿ ಈರುಳ್ಳಿ ಉಪ್ಪಿಟ್ಟಿನ ಬ್ರೇಕ್‌ಫಸ್ಟು. ಬ್ರೇಕ್ 'ಫಸ್ಟ್' ಆಯಿತೋ . . . ಆಮೇಲೆ ಮಾರ್ನಿಂಗ್ ವಾಕು ಅಂತ ಮಾವಳ್ಳಿ ಟಿಫಿನ್ ರೂಮ್ಸ್‌ಗೆ ಹೋಗಿ, ಅಲ್ಲಿ ಬ್ರೇಕ್ 'ಸೆಕೆಂಡು' . . . ಮೂರ್ ಮಸಾಲೆ . . . ಸ್ಪೆಷಲ್ ರೋಸ್ಟು! . . . ಮೇಲೊಂದು

ಮುದ್ದೆ ಬೆಣ್ಣೆ, ಗಟ್ಟೀ ಚಟ್ನೀ. 'ಆದಿ ಮಧ್ಯ ಅಂತ್ಯಾಯುಃಸಮಃ' ಅಂದ ಹಾಗೆ . . . ಈ ಬ್ರೇಕ್ 'ಫಸ್ಟ್' ಅಂಡ್ ಬ್ರೇಕ್ 'ಸೆಕೆಂಡ್'ಗಳ ಮೊದಲು . . . ನಡುವೆ . . . ಆಮೇಲೆ . . . ಒಂದೊಂದು ಲೋಟ ಸ್ಟ್ರಾಂಗಾಗಿ ಬಿಸಿಬಿಸಿ ಕಾಫಿ. ವಾಪಸ್ ಬರ್ತಾ ದಾರೀಲಿ, ಹಾಗೇ ಡಾಕ್ಟ್ರು ಅಂಗಡೀಗೆ ಧಾಳಿ ಇಟ್ಟು, 'ಈಚೀಚಿಗೆ ಅದ್ಯಾಕೋ ಊಟದಲ್ಲಿ ಅರುಚಿ ನೋಡಿ, ಡಾಕ್ಟ್ರೇ. ಅನ್ನವೇ ಸೇರೋಲ್ಲ . . . ಸೇರಿದ್ದು ಜೀರ್ಣವಾಗೋಲ್ಲ' ಅಂತ ನಬೂಬು ಹಾಕಿ, ಮನೇ ಲೆಕ್ದಲ್ಲಿ, ಡಬ್ಬಲ್ ಡೋಸ್ ಡೈಜೆಸ್ಟಿವ್ ಮಿಕ್ಚರ್ರು . . . ಮಧ್ಯಾಹ್ನದ ಊಟಕ್ಕೆ ಬೆಳಗ್ನಿಂದಲೇ ಪ್ರಿಪರೇಷನ್ನು! ಸರಿ, ಮನೇಗೆ ಬಂದರೋ . . . ಬರೋವಾಗ್ಲೇ ನಿದ್ರೇಲಿ ಮತ್ತು . . . ಎದ್ದ ಎರಡ್ಗಂಟೇಲೇ ಸೆಕೆಂಡ್ ರೌಂಡ್ ಸ್ಲೀಪು . . . ಅದೂ under a serious-looking ಶ್ರೀನಗರದ ಶಾಲು . . . Seventh Heaven ನ ಸುಖ . . . ಇಷ್ಟಾದ್ರೂ ಹೆಸರಿಗೆ ಮಾತ್ರ . . . (ಅಣಕಿಸುತ್ತ) 'ಹು . . . ಷಾ . . . ರಿ . . . ಲ್ಲ.' ಅಲ್ಲಾ, ನಮ್ಮಪ್ಪನಿಗೆ ಅವರಪ್ಪನ್ನ ಕಂಡರೆ ಎಷ್ಟು ಪ್ರೀತಿ ಅಂತೀನಿ. ನೋಡ್ತೊಂದ್ರೇ, ಈಗಿನ ಕಾಲದಲ್ಲಿ ಹುಡುಗರಾಗಿರೋದಕ್ಕಿಂತ old-hags ಆಗಿರೋದೇ ವಾಸೀ ಅಂತ ಅನ್ಸುತ್ತೆ. ಯಾಕೆ ಅಂತೀರೋ? ಹಾಳ್ ಈ ಫ್ಯಾಕ್ಟರೀ ಕೆಲಸಾ . . . ನೈಟ್‌ಷಿಫ್ಟು . . . ಓವರ್‌ಟೈಂಗಳ ಬದಲಾಗಿ . . . ಹಾಯ್ ಅಂತ ರಿಟೈರ್ಡ್ ಲೈಫು . . . ಪೋಸ್ಟಾಫೀಸ್ ತುಂಬಾ ಹಣ . . . Good old one-foot-in-the-grave ಫ್ರೆಂಡ್ಸೂ . . . ಕಬ್ಬನ್ ಪಾರ್ಕ್ ವಾಕ್ಸು. ತಂದ್ ಹಾಕೋಕ್ ಅಳಿಯಾ . . . ಮನೆಗೆಲಸಕ್ಕೆಲ್ಲಾ ಮೊಮ್ಮಗಾ! ಆರೈಕೇಗೆ ಒಬ್ಬಳು ಸಾಲದು ಅಂತಾ ಇಬ್ರು ಲವಿಂಗ್ ಡಾಟರ್ಸು! ಆ ಮನೇಲಿ ಆರು ತಿಂಗಳು . . . ಈ ಮನೇಲಿ ಆರು ತಿಂಗಳು. Two phases (ಫೇಜಸ್) of the moon ಇದ್ದಾಗೆ . . . two faces (ಫೇಸಸ್) of the old manಉ. ಹೇಗಿದೆ! After all, good old Shakespeare was right. old ageಉ ಅನ್ನಸ್ಕೊಂಡ ಈ ಸೆಕೆಂಡ್ ಇನ್ಫೆನ್ಸೀನಲ್ಲಿ . . . sans

eyes, sans tongue, sans everything . . . ಎವ್ರೆರಿಥಿಂಗೂ! (ಥಟ್ಟನೆ ಕಾಫಿಯ ನೆನಪಾಗಿ, ಎತ್ತಿದ ಸ್ವರದಲ್ಲಿ) ಅಮ್ಮಾ . . . ಕಾಫೀೀೀ.

ಸೀತಮ್ಮ—(ಒಳಬಾಗಿಲ ಬಳಿ ಕೈಯಲ್ಲಿ ಕಾಫಿಯ ಪೂನಾಲೋಟದ ಸಮೇತ ಕಾಣಿಸಿಕೊಂಡು) ಬಂತೂೂೂ . . .

ಸುಬ್ಬು—(ಕಾಫಿಯ ದರ್ಶನದಿಂದ ಹೊಸ ಜೀವ ಪಡೆದವನಂತೆ) Ah! there it comes! ಬಂತೂ, ಬಂತೂ, ಬಂದೇ ಬಿಡ್ತು. Down to earth it descends like Goddess Gange . . . coffee, the concoction of the very heaven in a ಖಾಲೀ ಕಪ್ಪು!

ಸೀತಮ್ಮ—(ಅವನ ಮಾತಿಗೆ ಗಮನ ಕೊಡದೆ) ಮಾರ್ಕೆಟ್ಟಿಗೇಂತ ಹೋದೋರು ಇನ್ನೂ ಬರಲಿಲ್ವೇನೋ, ನಿಮ್ಮಣ್ಣಾ? ಬಂದಿದ್ರೆ ಅವರ್ಗೂ ಅದೇ ಕೈಲಿ ಒಂದು ಲೋಟ ಕೊಟ್ಬಿಡಬಹುದಾಗಿತ್ತು.

ಸುಬ್ಬು—(ಕಾಫಿಯನ್ನು ಕೈಗೆ ತೆಗೆದುಕೊಳ್ಳುತ್ತ) ಅಮ್ಮಾ, ಪ್ಲೀಸ್. ನನ್ನಿನ್ನ್ ಐದ್ನಿಮಿಷ ಏನೂ disturb ಮಾಡಬೇಡಮ್ಮ . . . 'ಅಣ್ಣಾ . . . ಅಜ್ಜಾ' ಅಂತ. ನೀನ್ ಮಾಡಿದ ಈ concentrated concoction ಕುಡಿಯೋಕ್ಕೆ ಕೊಂಚ concentration ಬೇಕಮ್ಮಾ (ಕಾಫಿಯನ್ನು ಒಮ್ಮೆ ಸೊರ್ರನೆ ಹೀರಿ, ತನಗೆ ತಾನೇ) And so . . . none shall disturb this little Lord Siva when he drinks this poisonಉ! (ಮತ್ತೊಮ್ಮೆ ಗುಟುಕು ಸೋಡಿ, ಯಾವುದೋ ಸತ್ಯದ ಆವಿಷ್ಕಾರವಾದವನಂತೆ) Lord Siva! (ಸಂಶೋಧನೆಗೆ ತೊಡಗಿ) ನನ್ನ ಹೆಸರು ಸುಬ್ಬು . . . ಸುಬ್ಬೂ is equal to ಸುಬ್ರಮಣ್ಯೇಶ್ವರಾ. He . . . in his turn . . . is equal to Lord Siva. ಅಂದ್ರೇನಾಯ್ತು . . . Lord Siva is equal to Lord Subbu . . . So I am a Lordಉ . . . At least, Lord of myselfಉ . . . Q. E. D. . . . Quod Erat Demonstrandum. (ತಾಯಿಯ ಕಡೆ ತಿರುಗಿ, ಹೆಮ್ಮೆಯಿಂದ) ಮ್ಯಾಥ್‌ಮ್ಯಾಟಿಕ್ಸ್ ಇನ್ನೂ ಮರೆತಿಲ್ಲಾಮ್ಮಾ!

ಸೀತಮ್ಮ—(ಈ ಮಧ್ಯೆ ಒಳಗಿನಿಂದ ಇನ್ನೊಂದು ಲೋಟ ಕಾಫಿ ತಂದು, ಮಂಚದ ಬಳಿ

ಬಂದು, ಕಾಫಿಯ ಲೋಟವನ್ನು ಟೀಪಾಯಿ ಮೇಲಿಟ್ಟು, ಎಚ್ಚರಿಸುವ ಧ್ವನಿಯಲ್ಲಿ) ಅಪ್ಪಾ . . . ಅಪ್ಪಾ. ಅಪ್ಪಾ . . . ಅಪ್ಪಾ. ಸ್ವಲ್ಪ ಬಿಸಿ ಬಿಸಿ ಕಾಫಿ ತಂದಿದೀನಿ, ಕುಡಿದು ಮಲಕ್ಕೊಳೋರಂತೆ ಏಳೀಪ್ಪಾ. ತಲೆನೋವು, ಶೀತ ಕೊಂಚ ಕಮ್ಮಿಯಾಗುತ್ತೆ.

ಸುಬ್ಬು—(ಮಂಚದ ಕಡೆ ವ್ಯಂಗ್ಯಾತ್ಮಕವಾಗಿ ನೋಡುತ್ತ) ಅಮ್ಮನಂಥ ಸ್ವೀಟ್ ಡಾಟರ್ ಇರೋ ನಮ್ಮಜ್ಜನೇ ಪುಣ್ಯವಂತ! (ತಲೆದೂಗುತ್ತ) ಏನು ಪ್ರೀತೀ . . . ಎಷ್ಟು ವಿಶ್ವಾಸಾ . . . ಎಂಥಾ ಶುಶ್ರೂಷೇ . . . ಎಲ್ಲಾ old-world valuesಉ! (ಧ್ವನಿ ಬದಲಾಯಿಸಿ) ಹ್ಣ, ಹೋಗಿ, ಬಟ್ಟೇನಾದ್ರೂ ಹಾಕ್ಕೊಳೋಣ . . . ಈ ಫ್ರೆಂಡ್ಸ್ಉ ಅನ್ನಸ್ಕೊಂಡ ಗೂಂಡಾ-ಗ್ಯಾಂಗ್ ಬರೋ ಹೊತ್ಗೆ. (ಒಳಹೋಗುವನು.)

ಸೀತಮ್ಮ—(ಮಂಚದ ಮೇಲಿನ ವ್ಯಕ್ತಿಯನ್ನುದ್ದೇಶಿಸಿ) ಹಾಗೇ ಸ್ವಲ್ಪ ಏಳೀಪ್ಪಾ. ಕಾಫಿ ಆರ್ಹೋಗುತ್ತೆ . . . ಕುಡಿದು ಮತ್ತೆ ಮಲಕ್ಕೊಂಡ್ಬಿಡೋರಂತೆ. (ಮುಸುಕು ತೆಗೆದು, ಹಣೆ ಮುಟ್ಟಿನೋಡಿ, ಚಿಟ್ಟನೆ ಚೀರಿ ನಡುಗುವ ದನಿಯಲ್ಲಿ) ಅಯ್ಯೋ, ಇನ್ನೇನಪ್ಪಾ ಗತಿ . . . ಮೈ ಕೈಯೆಲ್ಲ ತಣ್ಣಗಾಗೋಗಿದೆ. ಸುಬ್ಬೂ . . . ಸುಬ್ಬೂ . . . ನಿಮ್ಮ ತಂದೆ ಬಂದ್ರೇ ನೋಡಪ್ಪ . . . ಇಲ್ದಿದ್ರೆ ಹೋಗಿ ಎಲ್ಲಿದಾರೇಂತ ನೋಡಿ ಕರಕೊಂಡು ಬಾರೋ.

ಸುಬ್ಬು—(ಒಳಗಿನಿಂದ ಒಗೆದು ಇಸ್ತ್ರಿಮಾಡಿದ ಷರಟನ್ನು ಅರ್ಧಮರ್ಧ ಸಿಕ್ಕಿ ಹಾಕಿಕೊಂಡು, ಬಾಗಿಲ ಬಳಿ ಕಾಣಿಸಿಕೊಳ್ಳುತ್ತ) ಏನಮ್ಮಾ ಅದು ನಿನ್ನ ಅವಾಂತ್ರ? ನಿಮಿಷಕ್ಕೊಂದ್ ಸಲ, 'ಸುಬ್ಬೂ, ನಿಮ್ಮ ತಂದೇನ ಕರಿಯೋ' 'ಸುಬ್ಬೂ, ನಿಮ್ಮ ತಂದೆ ಎಲ್ಲಿದಾರ್ನೋಡೋ' ಅಂತ ಕೂಕ್ಕೊತೀ. ಇಷ್ಟೆಲ್ಲಾ ಮಾತನಾಡೋಳ್ಗೆ ಅವರ್ನ ನೀನೇ ಹೋಗಿ ಕರದ್ರೆ, ಏನು ಬಾಯಿ ಸವೆದು ಹೋಗುತ್ತೆ?

ಸೀತಮ್ಮ—ಸಾಕಪ್ಪಾ, ನಿನ್ನ ಹುಡುಗಾಟ. ನಿಮ್ಮಜ್ಜ ಏನೋ ಒಂದು ತರಹ ಇದಾರೆ ಕಣೋ. ಬೇಗ ಬಾರೋ . . . ಅವರೆಲ್ಲಿ ಹೋದ್ರು ನೋಡೋ.

ಸುಬ್ಬು—(ತಿರಸ್ಕಾರದ ಧ್ವನಿಯಲ್ಲಿ) ಅದೇನು, ಏನೋ ಒಂದು ತರಹ ಇರೋದು ? ಹೋಗ್ಬಿಟ್ರೇನು ? ಹೋಗ್ಲಿ ಬಿಡು . . . good riddance of bad rubbish ಉ !

ಸೀತಮ್ಮ—(ಕೋಪದಿಂದ ಹಲ್ಲು ಕಚ್ಚಿ, ಜೊತೆಗೇ ಕಣ್ಣಿನ ಕಟ್ಟೆ ಹರಿಸಿ) ಸಾಕೋ . . . ನಿನ್ನ ದರಿದ್ರ ಭಾಷೆ.

ಸುಬ್ಬು—(ಹಲ್ಲು ಕಿರಿಯುತ್ತ) ಇಲ್ಲ, ಇಲ್ಲ. ತಪ್ಪಾಯ್ತು . . . ಬಯ್ಬೇಡ . . . ಕರೀತೀಸಿ. (ದಡಗುಟ್ಟುತ್ತ ಹೊರಬಾಗಿಲ ಬಳಿ ಹೋದವನು ಥಟ್ಟನೆ ನಿಂತು) ಓ ! . . . ಕರೆಯೋದೇನು ? ಅವರೇ ಬಂದ್ರಲ್ಲಾ ! (ಒಳಹೋಗುವನು.)

[ಎಡಗೈಯಲ್ಲಿ ತರಕಾರಿಯ ಚೀಲ ಹಿಡಿದು, ಬಲ ಕಂಕುಳಲ್ಲಿ ಸಭಿಕರಿಗೆ ಕಾಣುವಂತೆ ಹರಿದ ಹದಿನೇಳನೆಯ ಶತಮಾನದ ಒಂದು ಜತೆ ಎಕ್ಕಡವನ್ನು ಇರುಕಿಕೊಂಡು ಗುಂಡಪ್ಪ ಸಾವಧಾನವಾಗಿ ಪ್ರವೇಶಿಸುವನು.]

ಸೀತಮ್ಮ—(ತರಾತುರಿಯಿಂದ ಬಾಗಿಲ ಬಳಿ ಬಂದು) ಅಯ್ಯೋ, ನೋಡೀಂದ್ರೇ . . . ಅಪ್ಪಾ ಯಾಕೋ. . . .

ಗುಂಡಪ್ಪ—(ಅವಳ ಮಾತನ್ನು ಅಲ್ಲಿಗೇ ಮೊಟಕಿಸಿ, ಯಾವ ಬಗೆಯ ಭಾವನೆಯೂ ಇಲ್ಲದ ಕಲ್ಲುದನಿಯಲ್ಲಿ) ಅಯ್ಯ್ಯಯ್ಯ್ಯಯ್ಯ್ಯಯ್ಯ್ಯಯ್ಯೋ . . . ನಿನಗೆ ನಿಮ್ಮಪ್ಪನ ಚಿಂತೆ . . . ನನಗೆ ನನ್ನ ಚಪ್ಪಲಿ ಚಿಂತೆ. ದಾರೀಲ್ ಬರ್ತಾ ಉಂಗುಷ್ಟ ಕಿತ್ತು, ಮೂವತ್ತು ಸಲ ಮುಗ್ಗರಿಸಿ, ಎಪ್ಪತ್ತು ಸಲ ಎಡವಿ, ಅವರಿವರ ಮನೆ ಬಾಗಿಲಿಗೆ ಅಡ್ಡಬಿದ್ದು, ಕೊನೇಗೆ ಕಂಕುಳಲ್ಲೇ ಇರಕ್ಕೊಂಡು 'ಬದುಕಿದ್ಯಾ ಬಡಜೀವವೇ' ಅಂತಾ ನಾ ಬರ್ತಿದೀನಿ. (ಎಕ್ಕಡವನ್ನು ಧೊಪ್ಪೆಂದು ನೆಲಕ್ಕೆ ಒಗೆದು ತರಕಾರಿಯ ಚೀಲವನ್ನು ದುಂಡುಮೇಜಿನ ಮೇಲೆ ಇರಿಸುವನು.)

ಸೀತಮ್ಮ—(ನೋವಿನ ಧ್ವನಿಯಲ್ಲಿ ತನಗೆ ತಾನೇ) ಒಳ್ಳೇ ತಂದೇಮಕ್ಕಳಾದ್ರಲ್ಲ ಇವರು . . . (ಪ್ರಕಟವಾಗಿ, ಗೋಗರೆಯುತ್ತ) ಅಯ್ಯೋ, ನಿಮ್ಮ ದಮ್ಮಯ್ಯ, ಇಲ್ಲಿ ಕೇಳೀಂದ್ರೇ . . . ಏನೋ ಒಂದು ತರಹ ಇದಾರೇಂದ್ರೇ, ನಿಮ್ಮ ಮಾವನವರು.

ಗುಂಡಪ್ಪ—(ಮಂಚದತ್ತ ಒಮ್ಮೆ ಕ್ರೂರವಾಗಿ ನೋಡಿ, ವ್ಯಂಗ್ಯ ಮತ್ತು ಕೋಪ ಬೆರೆತ ಧ್ವನಿಯಲ್ಲಿ) ಗೊತ್ತೆ . . . ಗೊತ್ತೇ! ಅವರ ಇರಿಕೆ, ಅವರ ತರಹ, ಅವರ ಜಾಯಮಾನ, ಅವರ ಸಮಸ್ತವೂ ಗೊತ್ತೇ. ನೀನೇನು ಹೊಸದಾಗಿ ಹೇಳಬೇಕೆ? ಆರು ವರ್ಷದಿಂದ ಒಂದು ದಿನ ತಪ್ಪದೇ ಹಗಲೂ ರಾತ್ರಿ ನೋಡ್ತಾ ಇಲ್ವೇನು? ಯಾರಿಗಿರಲಿ, ಯಾರಿಗಿಲ್ಲದೇ ಹೋಗಲಿ, ಗಂಟಲತನಕ ಗಡತ್ತಾಗಿ ಉಂಡು, 'ಮೈಯಲ್ಲಿ ಇರಸು ಮುರಸು' ಅಂತ ಮುಸುಕೆಳೆದುಕೊಂಡು ಮಲಗಿರೋ ಮಹಾ ರೋಗ . . . ಮಲ್ಲೋಗರ. ನೋಡು, ಹಾಗೆ ಮಲಗಿರೋರ್ನ ಎಬ್ಬಿಸೋಕೆ ಒಂದು ಪರಮೌಷಧ ಇದೆ. ಏನಾದ್ರೂ ಒಂದಿಷ್ಟು ತಿನ್ನೋಕ್ಕೋ ಕುಡಿಯೋಕ್ಕೋ ಕೊಡ್ತೀನಿ ಅಂತಂದು ನೋಡು . . . ತಾನಾಗೇ ಏಳುತ್ತೆ! (ಟೀಪಾಯಿ ಮೇಲಿರುವ ಕಾಫಿಯ ಬಟ್ಟಲು ಕಣ್ಣಿಗೆ ಬೀಳಲು, ಒಂದು ಸಲ ಅವಳ ಕಡೆ ಚುಚ್ಚಿ ನೋಡಿ) ಏನ್ ಕಾಫೀನೋ? . . . ಕಿವುಡು ಜೇರೆ ಕಣೇ ಆ ಮುದಿ ಹೆಗ್ಗಣಕ್ಕೇ! ಜೋರಾಗಿ ಕೂಗೇ 'ಕಾ . . ಫೀ' ಅಂತ . . . ಕಂಡೂ ಕಾಣದ್ಹಾಗೆ ಕಣ್ಮುಚ್ಚಿ ಕೊಂಡೇ ತಳದ ತನಕ ಹೀರಿ ಮಲಗಿಕೊಳ್ಳುತ್ತೆ!

ಸೀತಮ್ಮ—(ಬಿಕ್ಕಿಬಿಕ್ಕಿ ಅಳುತ್ತ) ಅಯ್ಯೋ, ಇಲ್ಲಾಂದ್ರೇ. ಮೈಕೈಯೆಲ್ಲಾ ತಣ್ಣಗಾಗಿದೆ . . . ಉಸಿರು ಆಡೋದು ನಿಂತ್ಹೋಗಿದೆ . . . ಯಾರಾದ್ರೂ ಡಾಕ್ಟರಿಗೆ ಹೇಳಿಕಳಿಸೀ ಅಂದ್ರೆ.

ಗುಂಡಪ್ಪ—(ಸಂದರ್ಭದ ಗಂಭೀರತೆಯು ಅರಿವಾಗಿ ಒಂದು ಕ್ಷಣ ಗಾಬರಿಗೊಂಡು) ಆ್ಞ . . . (ಮತ್ತೆ ತನ್ನನ್ನು ತಾನು ಮೊದಲಿನ ಸ್ಥಿತಿಭಾವಕ್ಕೆ ತಂದುಕೊಂಡು ನಗುತ್ತ) ಹ್ಹ . . . ಹ್ಹ . . . ಹ್ಹ. ಏನ್ ಹೋಯ್ತೇನು? ಹೋಗಲಿ ಬಿಡು. ಪೀಡೆಯೇ ಕಳೀತು. ಒಳ್ಳೇ ಮಂಗಳವಾರದ ದಿನ . . . ನೇರವಾಗಿ ನರಕಕ್ಕೇ ಹೋಗುತ್ತೆ, ನರಪಿಶಾಚೀ!

ಸೀತಮ್ಮ—(ನೋವಿನ ಧ್ವನಿಯಲ್ಲಿ) ಯಾಕೇಂದ್ರೇ . . . ಈ ತರಹ ಕೆಟ್ಟದ್ದ ಆಡಿ ಹೊಟ್ಟೇ ಉರಸ್ತೀರಿ?

ಗುಂಡಪ್ಪ—(ವ್ಯಂಗ್ಯವಾಗಿ) ಹೊಟ್ಟೆ . . . ಉರಿಯುತ್ತೋ? ದಿನಾ ಒಲೆ ಹಚ್ಚಿ

ಅಡಿಗೆಮಾಡೋ ನಿನಗೆ, ಇನ್ನೊಬ್ಬರು ಬೆಂಕಿ ಇಟ್ಟರೇನೇ ಹಾಗೆ ಉರಿ ಏಳೋದು ಅಂತ ಗೊತ್ತಲ್ಲ! ಇಲ್ಲಿ ನೋಡೀಗ. ನಿನ್ನ ಹೊಟ್ಟೇ ಉರೀಗೆ, ನಾನು . . . ಅಂದರೆ ನನ್ನೆದೆ ಬೆಂಕಿ, ಕಾರಣ. ನನ್ನೆದೇಲಿ ಬೆಂಕಿ ಇಟ್ಟದ್ದು, ನಿಮ್ಮಪ್ಪನ ಬೆಂಕಿಪೊಟ್ಟಣ! ತಿಳೀತೆ ಅರ್ಥ? ನಮ್ಮಿಬ್ಬರ ನೋವಿಗೂ . . . ನಿಮ್ಮಪ್ಪ . . . ನಮ್ಮಾವ . . . ಈ ಮುದಿಗೂಬೆ ಕಾರಣ. ಇವತ್ತಿಗೆ ಹತ್ತಿರ ಹತ್ತಿರ ಆರು ವರ್ಷವಾಯಿತು. (ಕರುಣೆ ಬೆರೆತ ತಗ್ಗಿದ ಧ್ವನಿಯಲ್ಲಿ) ನಿಮ್ಮಮ್ಮ ಸತ್ತ ಹೊಸದರಲ್ಲಿ 'ಏನೋ ಪಾಪ! ಗಂಡು ಸಂತಾನವಿಲ್ಲದ ಜೀವ. ನಮ್ಮ ಕಷ್ಟಸುಖಕ್ಕೂ ಆಗಿ, ಮನೇಗೆ ಹಿರೇರಾಗಿ ಇದ್ದುಕೊಂಡು ಹೋಗ್ಲಿ' ಅಂತ — ನನಗೆ ಮುಂದೆ ಹೀಗಾಗಬಹುದು ಅಂತ ಅನುಮಾನವಿದ್ರೂ!—ಕರಸಿ ಕೊಂಡದ್ದಾಯ್ತು. ಕೇವಲ 'ಭೂತದಯೆ' ಅಂತಾರಲ್ಲ, ಅದ ಕ್ಕೋಸ್ಕರ. ಆದರೆ ಆದದ್ದೇನು? ಆ 'ಭೂತದಯೇ'ಲಿ 'ದಯೆ'ಯೆಲ್ಲಾ ಆದರ ಪಾಲು . . . ನಮಗುಳಿದದ್ದು ಅಂದ್ರೆ ಉಳಿದ 'ಭೂತ'! (ಹಂಗಿಸುತ್ತ) ಭೂತಾ ಅಂದೆ ನಿಮ್ಮಪ್ಪನ್ನ! (ಸೀತಮ್ಮ ಕಣ್ಣೀರಿನ ನಡುವೆ ಕಿಡಿಗಣ್ಣಾಗಿ ನೋಡುವಳು. ಅವಳನ್ನು ಅಷ್ಟೇ ತೀಕ್ಷ್ಣತೆಯಿಂದ ಎದುರಿಸಿ ನೋಡಿ, ಕ್ಷಣಕಾಲ ಬಿಟ್ಟು) ಏನ್ ನೋಡ್ತಿದಿ ಹಾಗೆ? . . . ಹ್ನ್ಞ, ಇನ್ನು ಅದಕ್ಯಾಕ್ ಆ ಕಾಫಿ? ಕೊಡೂ ಇಲ್ಲಿ. ಹೇಗಿದ್ದರೂ ಹೊರಗ್ನಿಂದ ಬಂದಿದೀನಿ. (ಟೀಪಾಯಿಯ ಮೇಲಿನ ಕಾಫಿಯನ್ನು ಕೈಚಾಚಿ ಎತ್ತಿಕೊಂಡು, ಯೋಚನಾಮಗ್ನ ಮುಖಮುದ್ರೆಯಿಂದ ಗುಟುಕು ಗುಟುಕಾಗಿ ಕುಡಿಯುವನು.)

ಸೀತಮ್ಮ—ಇದ್ಯಾಕ್ ಹೀಗಾಡ್ತೀರಿ ಅಂದ್ರೇ. ನಿಮ್ಮ ಕೋಪ ದ್ವೇಷಕ್ಕೆಲ್ಲಾ ಇದೇ ಹೊತ್ತು? ಮನೇಲಿ ಅವರು ಸತ್ತುಮಲಗಿರೋವಾಗ ಸ್ವಲ್ಪ ವಾದರೂ ಮರುಕ ಬೇಡವೆ? ಇದೇಯೇ ಮನುಷ್ಯತ್ವ? ಯಾರಾದ್ರೂ ಡಾಕ್ಟರನ್ನ ನೋಡೀಂದ್ರೇ. ಏನಾಗಿದೆ ಅನ್ನೋದಾದ್ರೂ ಖಚಿತ ವಾಗಲಿ. (ಗುಂಡಪ್ಪ ಏನೂ ಆಗಿಲ್ಲದವನಂತೆ ತನ್ನ ಪಾಡಿಗೆ ತಾನು ಕಾಫಿ ಹೀರು ತ್ತಿರುವನು. ಆ ಹೊತ್ತಿಗೆ ಸುಬ್ಬುವಿನ ಪ್ರವೇಶ.) ಸುಬ್ಬೂ . . . ನೀನಾದ್ರೂ ಡಾಕ್ಟ್ರನ್ನ . . .

ಗುಂಡಪ್ಪ—(ಎತ್ತರದ ಧ್ವನಿಯಿಂದ ಅಡ್ಡಹಾಕಿ) ಸು—ಬ್ಬಾ.

ಸುಬ್ಬು—ಏನಣ್ಣಾ ?

ಗುಂಡಪ್ಪ—(ಸೀತಮ್ಮನತ್ತ ನೋಡಿ) ಹೇಳಿಕಳಿಸೋಕ್ಕೆ ಮುಂಚೆ ಇನ್ನೊಂದ್ ಸಲ ನೋಡ್ಬಿಡೇ . . . ಮೈಕೈ ನಿಜವಾಗಿಯೂ ತಣ್ಣಗಾಗಿದೆಯೇ ಅಂತಾ.

ಸೀತಮ್ಮ—(ಗಂಡನ ಮಾತಿನ ಧಾಟಿಯಿಂದ ಅವನ ಮನೋಭಾವ ಬದಲಾಯಿತೇನೋ ಎಂದು ಭ್ರಮೆಗೊಂಡು) ಬದುಕಿರೋರ್ನ ಸುಮ್ಮಸುಮ್ಮನೆ ಸಾಯ್ಸಿ ಅಳೋಕ್ಕೆ ನನಗೇನು ಹುಚ್ಚೋ, ಹುಡುಗಾಟವೋ ! ನೀವೇ ನೋಡಿ ಬೇಕಾದ್ರೆ.

ಗುಂಡಪ್ಪ—(ಮಂಚದ ಕಡೆ ಕಾಲಿಟ್ಟವನು ಮತ್ತೇಕೋ ಮನಸ್ಸು ಬದಲಾಯಿಸಿ) ಕಾಶೀಯಾತ್ರೇಲಿ ಕಾಲು ಮುಟ್ಟಿಸಿಕೊಂಡದ್ದೇ ಕೊನೆಯಾಯಿತು. ಆದಾದ ಮೇಲೆ ಮುಟ್ಟೋದಿರಲಿ, ಮುಖ ಎತ್ತಿ ನೋಡಲಿಲ್ಲ ಒಬ್ಬರಿಗೊಬ್ಬರು . . . ಒಂದೇ ಮನೇಲಿದ್ರೂ ! ಬದುಕಿದ್ದಾಗಲೇ ಇಲ್ಲದ್ದು, ಇನ್ನು ಈಗ ಸತ್ತಮೇಲೇಕೆ ಆ ಮುದಿ ಹೆಣಾನ ಮುಟ್ಟಲಿ ? ಅಲ್ಲದೇ, ಅದೇನೋ ಹೇಳ್ತಾರಲ್ಲ . . . ಸತ್ತ ಹೆಣಾ ಮುಟ್ಟಿದರೆ ಜೋಡಿಸೂತಕವಂತೆ . . . ಸತ್ತದ್ದಕ್ಕೊಂದು, ಮುಟ್ಟಿದ್ದಕ್ಕೆ ಮತ್ತೊಂದು ! ಎಷ್ಟೇ ಆದರೂ ಪ್ರೀತಿಯ ಮಗಳು ನೀನು. ನೀನೇ ನೋಡಿ ಸತ್ತಿದೆ ಅಂದಮೇಲೆ, ನಾನು ಸತ್ತಿಲ್ಲ ಅಂತ ಸಾಧಿಸ್ತೇನೆಯೆ ? ಸ್ಮಶಾನಕ್ಕೆ ಸಾಗಿಸಿ ಅಂತೀನಿ !

ಸೀತಮ್ಮ—ಸುಬ್ಬೂ . . . ಹೋಗ್ಲಿ, ನೀನಾದ್ರೂ ನೋಡೋ.

ಸುಬ್ಬು—(ಥಟ್ಟನೆ ಸತ್ತಿಲಿಯನ್ನು ಕಂಡಾಗ ದೂರ ನೆಗೆಯುವವನಂತೆ, ಅಷ್ಟೇ ಭಯ ಅಸಹ್ಯ ಮಿಶ್ರಿತ ಧ್ವನಿಯಲ್ಲಿ) ಅಯ್ಯಯ್ಯಯ್ಯಯ್ಯೋ . . . ನಂಗ್ ಭಯವಾಗುತ್ತಮ್ಮ. Death ಅನ್ನೋದು dangerousಉ. ಜೊತೇಗೆ contagious ಬೇರೆ. ನಾನ್ ಮುಟ್ಟುಗಿಟ್ಟೋದಿಲ್ಲ.

ಸೀತಮ್ಮ—(ನಿಸ್ಸಹಾಯಕತೆಯಿಂದ ತನಗೆ ತಾನೇ) ಏನ್ ಹುಟ್ಟಿಸ್ದಾ, ಈ ತಂದೆ ಮಕ್ಕಳದ್ದು ? (ಮಂಚದ ಬಳಿಗೆ ಹೋಗುವಳು.)

ಗುಂಡಪ್ಪ—(ಥಟ್ಟನೆ ಧ್ವನಿ ಏರಿಸಿ) ನೋಡು, ಮುಸುಕುಗಿಸುಕು ತೆಗೀಬೇಡ. ನನ್ನ ಕೈಲಿ ಆ ಸತ್ತ ಮೋರೆ ನೋಡೋಕ್ಕಾಗೋಲ್ಲ. ಶಾಲ್ ಒಳಗ್ನಿಂದಾನೇ

ಕೈ ಹಾಕಿ ನೋಡಿ ಹೇಳ್ಬಿಡು. (ಮಾಮೂಲಿನ ಧ್ವನಿಯಲ್ಲಿ) ಸುಬ್ಬಾ. . . ಬೇಗ ಹೋಗಿ, ಆ . . . ಇವರ್ನ ಬರಹೇಳೋ. ಯಾರನ್ನ ? ಆ ಕಟ್ಟೇ ಮನೆ ಶ್ರೀಕಂಠಶ್ರೌತಿಗಳನ್ನ !

ಸೀತಮ್ಮ—(ಮಿಂಚು ಬಡಿದವಳಂತೆ) ಇದೇನೂಂದ್ರೆ ಹುಡುಗಾಟ? ಡಾಕ್ಟರಿಗೆ ಹೇಳಿಕಳಿಸೋದು ಬಿಟ್ಟು . . .

ಗುಂಡಪ್ಪ—(ವ್ಯಂಗ್ಯವಾಗಿ) ಸಂಗೆ . . . ಗೊತ್ತಿದೆ. ಯಾವ ಯಾವ ಕಾಲಕ್ಕೆ, ಯಾರ್‌ಯಾರಿಗೆ, ಏನೇನು ಹೇಳಿ ಕಳಿಸ್ಬೇಕು ಅಂತಾ !

ಸುಬ್ಬು—(ಮಧ್ಯೆ ಬಾಯಿ ಹಾಕಿ) You are right ಕಣಣ್ಣಾ. For a dying or a half-dead manಉ. . . ಡಾಕ್ಟರ್ ಅಲ್ಲ ಬೇಕಾದ್ದು. Instead of surgeons and physicians . . . soul-saving ಶ್ರೌತೀಸು . . . and their scripturesಉ ! (ವ್ಯಂಗ್ಯವಾಗಿ) Of course, very scientificಉ !

ಗುಂಡಪ್ಪ—(ಅಟ್ಟಕೊಳ್ಳುತ್ತ) ತಲೇಹರಟೆ, ಹೇಳ್ದಷ್ಟ್ ಕೇಳೋ. ಹೋಗೋ, ಬೇಗ ಬಾ ಹೋಗೋ. (ಸುಬ್ಬು ಪೆಚ್ಚಾಗಿ ಹೋಗುವನು. ಅವನು ಬಾಗಿಲು ಮುಟ್ಟಿದೊಡನೆಯೆ, ಗುಂಡಪ್ಪ ಏನನ್ನೋ ನೆನಸಿಕೊಂಡವನಂತೆ ಎತ್ತರದ ಧ್ವನಿಯಲ್ಲಿ) ನೋಡು, ಹೇಳೋವಾಗ ಕೊಂಚ ಕಣ್ಣಲ್ಲಿ ನೀರ್ ಬರಸ್ಕೊಂತಾ ಬರಸ್ಕೊಂತಾ ಹೇಳೋ. ಇಲ್ದಿದ್ರೆ, ಸತ್ತೂ ಅಳ್ಲಿಲ್ಲ ಅಂತಾರೆ, ಈ ಜನ !

ಸುಬ್ಬು—ಓಹೋ ! ನನಗೆ ಹೇಳಿಕೊಡಬೇಕೇನಣ್ಣಾ, ಇದನ್ನೆಲ್ಲಾ !

ಗುಂಡಪ್ಪ—ಸುಬ್ಬಾ . . . ಹಾಗೇ ಇನ್ನೊಂದ್ಮಾತು. ಒಂದೆರಡು ಗಂಟೆ ಹೊತ್ತಾಗಿ ಬರ್ತೀನಿ ಅಂತ ಆಫೀಸ್ನಲ್ಲಿ ಹೇಳಿದ್ದೆ . . . ಎಲ್ಲಿಂದಾದ್ರೂ ಫೋನ್ ಮಾಡಿ, ಸಮಾಚಾರ ತಿಳಿಸಿ, ಇವತ್ತೊಂದು ದಿನಕ್ಕೆ ಕ್ಯಾಷ್ಯುಯಲ್ ಲೀವ್ ಕೊಡಬೇಕಂತೇನ್ನೂ.

ಸುಬ್ಬು—ಅಷ್ಟಲ್ದೇ ! ಮನೇಲಿ ಹೆಣ ಉರುಳಿ Casuality Case ಆಗಿರೋವಾಗ ಒಂದ್ Casual Leaveಊ ಬೇಡವೇ ! ಹೇಳ್ತೀನಿ, ಹೇಳ್ತೀನಿ.

[ಸೀತಮ್ಮ ನಿನ್ನೂ ಮಂಚದ ಬಳಿಯಲ್ಲಿಯೇ ಇದ್ದಾಳೆ. ಬಿಕ್ಕಿ ಬಿಕ್ಕಿ ಅಳುತ್ತಿರುವುದು ಕೇಳಿಬರುತ್ತಿದೆ.]

ಗುಂಡಪ್ಪ—(ನಿಟ್ಟುಸಿರು ಬಿಡುತ್ತ, ಸ್ವಗತ) ಅಬ್ಬಾ! ಅಂತೂ ಭಗವಂತ ಕೊನೇಗೂ ಕಣ್ಬಿಟ್ಟು ನೋಡಿದ ಹಾಗಾಯ್ತು! ಅಲ್ಲಾ, ಮನುಷ್ಯರ ತಾಳ್ಮೇಗೂ ಮಿತಿ ಇದೆ. ಒಂದು ದಿನವೇ . . . ಎರಡು ದಿನವೇ ? ಆರು ವರ್ಷ . . . ಎಪ್ಪತ್ತೆರಡು ತಿಂಗಳು . . . (ಗುಣಿಸುತ್ತ) ಎಪ್ಪತ್ತೆರಡು ಇಂಟೂ ಮೂವತ್ತು . . . ಸೊನ್ನೇಗೆ ಸೊನ್ನೆ . . . ಮೂರ್ ಎರಡ್ಲ ಆರು . . . ಮೂರ್ ಏಳ್ಲ ಇಪ್ಪತ್ತೊಂದು . . . ಎರಡು ಸಾವಿರದ ನೂರರವತ್ತು ದಿನ . . . ಅದರಲ್ಲಿ, ಆಗ ಈಗ, ಆ ಮಗಳ ಮನೇಲಿದ್ದ . . . ಒಂದು . . . ಒಂದು ನೂರರವತ್ತು ದಿನಾ ಕಳದ್ರೂ ನೂ . . . ಉಳಿದ ಎರಡು ಸಾವಿರ ಹಗಲು, ಎರಡು ಸಾವಿರ ರಾತ್ರಿ, ಇದರ ಕೈಲಿ ಸುಲಿಸಿ ಕೊಂಡು ಸುಲಿಸಿಕೊಂಡು ಸಾಕಾಗಿಬಿಟ್ಟಿತ್ತು. ಅದೂ ಅಂಥಿಂಥ ಸುಲಿ ಗೇನೆ? ಸ್ವಂತ ಹೊಟ್ಟೇಲಿ ಹುಟ್ಟಿದ ಮಗಳ ಮನೆಯಾದ್ರೂ, ಮನೇಗೆ ಮೂರು ಕಾಸು ಬಿಚ್ಚಿದರೆ ಮೂರು ಲೋಕವೇ ಮುಳುಗ್ಹೋಗು ತ್ತೇನೋ ಅನ್ನೋ ಹಾಗೆ . . . ಬಂದ ಪೆನ್‌ಷನ್‌ನೆಲ್ಲಾ ಪೋಸ್ಟಾ ಫೀಸಿನಲ್ಲಿ ಬಚ್ಚಿಟ್ಟು . . . ಜಿಟ್ಟಿ ಕೂಳು ಗಿಟ್ಟಿಸಿ ಜೀಳೀತಿತ್ತು, ಇಲ್ಲೀ ವರೆಗೂ. ನಾನ್ ಅಳಿಯ . . . ಎಷ್ಟೇ ಆದರೂ ಹೊರಗ್ನೋನು . . . ನನಗೊಂದು ದಮ್ಮಡಿ ಬೇಡ! ಮನೇಗೆ ಬೇಡ್ವೆ? ಮಗಳಿಗೆ ಬೇಡ್ವೆ? ಕೊನೇಗೆ . . . ಆ ಇರೋ ಒಬ್ಬ ಮೊಮ್ಮಗನಿಗಾದರೂ ಬೇಡ್ವೆ? ಹ್ಞ್, ಇಷ್ಟಾದರೂ ಇದರ ಷೋಕೀಗೆ ಮಾತ್ರ ಎಣೇ ಇಲ್ಲ. ಎಪ್ಪತ್ತರ ವಯಸ್ಸಿನಲ್ಲಿ ಇಪ್ಪತ್ತರ ಚಪಲ. ಆ ಜರಿ ರುಮಾಲೇನು! ಆ ಸಿಲ್ಕ್ ಕೋಟೇನು? ಆ ಫಿನ್ಲೇ ಪಂಚೆಯೇನು? ಆ ಗಿರಕಿ ಚಡಾವೇನು! (ನಗುತ್ತ) ಹ್ಹ ಹ್ಹ ಹ್ಹ . . . . ಒಂದು ಥರದಲ್ಲಿ ಒಳ್ಳೇದೇ ಆಯ್ತೂನ್ನಿ. ಇನ್ನು ಅವೆಲ್ಲಾ ಮತ್ಯಾರಿಗೆ? ಆ ಇನ್ನೊಬ್ಬ ಮಗಳೂ ಅಳಿಯನೇನೋ ಇದಾರೆ . . . ಇದೇ ಊರ್ನಲ್ಲಿ, ಮೂರು ಬೀದೀ ಆಚೆ. ಆದರೆ 'ಘಾಟೀ ಗುಂಡಪ್ಪ' ಅನ್ನಿಸ್ಕೊಂಡೋನು ನಾನೋ ಅವರೋ, ನೋಡಿಯೇಬಿಡೋಣ! (ಸೀತಮ್ಮ ಮೆಲ್ಲನೆ ಬಿಕ್ಕಿಬಿಕ್ಕಿ ಅಳುತ್ತಲೇ ಇರುವಳು. ಗುಂಡಪ್ಪ ಅವಳ ಕಡೆ ಒಮ್ಮೆ ದೀರ್ಘವಾಗಿ ನೋಡಿ)

ನನ್ನ ದಾರೀಲಿ ಇರೋ ದೊಡ್ಡ ಅಡ್ಡಬಂಡೆ ಅಂದರೆ ಆ ಮಗಳೂ ಅಳಿಯನಲ್ಲ . . . ಇವಳು. ಇವಳ ಸ್ವಭಾವ, ಇವಳ ಸಾಧುತನ. ಅವರಪ್ಪನ ಮೇಲಿನ ಅವಳ ಪ್ರೀತೀಗೆ ಬೆಲೆಕೊಟ್ಟು, ಹೇಗೆ ಇಲ್ಲೀವರೆಗೆ ಅನುಭವಿಸಿದ್ನೋ ಹಾಗೆ . . . ಇನ್ನು, ಇವಳ ತಂಗಿ-ಮೈದುನನ ಮೇಲಿನ ಮಮತೇಗೂ ಧರ್ಮರಾಯತನಕ್ಕೂ ಸೊಪ್ಪುಹಾಕಿದ್ದೇ ಆದರೆ . . . ಮಾವನ ಆಸ್ತೀನ ಪಡ್ಕಂಗೆ ಸಮಸಮ ಹಂಚಿಕೊಟ್ಟು, ಸಾಯೋವರೆಗೂ ಕಣ್‌ಕಣ್ ಬಿಡಬೇಕಾಗುತ್ತೆ ಅಷ್ಟೆ. ಈಗ ಮುಖ್ಯ ವಾಗಿ . . . ಇವಳ್ನ ಒಲಿಸ್ಕೊಳೋ ಹಾಗೆ ಏನಾದ್ರೂ ಉಪಾಯ ಹೂಡ್ಬೇಕು. (ಯೋಚಿಸುತ್ತ) ಇರಲಿ . . . ಇನ್ನೊಬ್ಬರ ದೌರ್ಬಲ್ಯವೇ ನಮ್ಮ ಕೈಯಿನ ಶಕ್ತಿ ಅಂತಾರೆ, ಅರಿತೋರು. ಇಲೀಗೇ . . . ತಿಂಡೀ ಆಸೆ. ಆ ತಿಂಡೀನೇ ಒಡ್ಡಿ . . . ಇಲೀನ ಹಿಡಿದು ಹಾಕೋಲ್ವೇನು ನಾವು, ಬೋನ್ನಲ್ಲಿ? (ಮಂಚದ ಹತ್ತಿರಕ್ಕೆ ಹೋಗಿ, ಪ್ರೀತಿ ನಟಿಸಿ, ಸೀತಮ್ಮನ ಬೆನ್ನು ನೇವರಿಸುತ್ತ) ಸೀತೂ . . . ಇನ್ನ್ನ ಅತ್ತು ಏನು ಪ್ರಯೋಜನಾಮ್ಮ . . . ನಿನ್ನ ನೋಡಿದ್ರೆ ನನಗೂ ದುಃಖವಾಗ್ತಿದೇ ಕಣೇ . . . ಬಾ, ಸೀತೂ. (ತನ್ನನ್ನು ತಾನೇ ಶಪಿಸಿಕೊಳ್ಳುವವನಂತೆ) ನನ್ನ ಬಾಯಿೂ ತಡೆಯೋಲ್ಲ . . . ಯಾವುದೋ ಹಳೇ ಸಿಟ್ಟೂ ಕೋಪದ ಭರದಲ್ಲಿ ನಾನೂ ಏನೇನೋ ಆಡಿ ನಿನ್ನ ದುಃಖ ಹೆಚ್ಚಿಸಿಬಿಟ್ಟೇನಿ . . . ಹೋಗ್ಲಿ, ಬಾ ಸೀತೂ. (ಮೆಲ್ಲನೆ ಅವಳನ್ನು ಎಬ್ಬಿಸಿಕೊಂಡು ರಂಗದ ಮುಂದಕ್ಕೆ ತಂದು, ಕುರ್ಚಿಯ ಮೇಲೆ ಕೂರಿಸುವನು. ಸೀತಮ್ಮ ಇನ್ನೂ ಬಿಕ್ಕುತ್ತಿದ್ದಾಳೆ.) ಬೇಡ, ಅಳ್ಬೇಡಾ ಸೀತಾ. ಸಮಾಧಾನ ಮಾಡ್ಕೋ. (ಬೋಧನೆ ಮಾಡುತ್ತ) ಪ್ರಪಂಚದಲ್ಲಿ ಹುಟ್ದೋರು ಯಾರು ತಾನೇ ಸಾಯ್ದೇ ಇರ್ತಾರೆ? ಜೀವ ಅನ್ನೋದು ನಶ್ವರ . . . ತಂದೇ, ತಾಯಿ, ಅಣ್ಣಾ, ತಂಗೀ ಅನ್ನೋದೆಲ್ಲ ಮಾಯೆ, ಸೀತಾ! ದೊಡ್ಡ ಮಾಯೆ! ನೀವು ಹೆಂಗಸ್ರು ಯಾವಾಗ್ಲೂ ಹೀಗೇ . . . ಅಷ್ಟೊಂದು ಪುರಾಣ ಪುಣ್ಯಕಥೆ ಕೇಳೀನೂ, ತೀರ್ಥ ಕುಡಿದು ಮಂಗಳಾರತಿ ಕಣ್ಣಿಗೊತ್ತಿಕೊಂಡರೂನೂ . . . ಬದುಕಿನಲ್ಲಿ ಮಾತ್ರ ಎಳ್ಳಷ್ಟೂ

ವೇದಾಂತ ತಂದುಕೊಳ್ಳೋದಿಲ್ಲ. ನೀನು ಕೇಳಿಲ್ವೇ, ಸೀತಾ . . . 'ಜಾತಸ್ಯ ಹಿ ಧ್ರುವೋ ಮೃತ್ಯುಃ, ಧ್ರುವಂ ಜನ್ಮ ಮೃತಸ್ಯ ಚ' ಅಂತ. ಹುಟ್ಟೋವಾಗ್ಲೇ ಹಣೇಲಿ ಬರೆದ್ಬಿಟ್ಟಿರ್ರಾನೆ, ಬ್ರಹ್ಮ . . . ಸಾವಿನ ದಿನಾ, ಗಂಟೇ, ನಿಮಿಷಾನ್ನ ನಿಷ್ಕರ್ಷೆ ಮಾಡಿ. ಇನ್ನು ನಮ್ದೇನಿದೆ? (ಸೀತಮ್ಮ ಸ್ವಲ್ಪ ಸಾಂತ್ವನಗೊಳ್ಳುವಳು. ಅವಳ ಅಳು ಕಡಿಮೆಯಾಗಿ 'ಹೌದು' ಎನ್ನುವಂತೆ ತಲೆ ಅಲ್ಲಾಡಿಸುವಳು. ಗುಂಡಪ್ಪ ಇನ್ನೊಂದು ಬದಿಗೆ ಮುಖ ತಿರುಗಿಸಿ ವಿಜಯದ ನಗೆ ನಕ್ಕು, ಕಣ್ಣು ಮಿಟುಕಿಸಿ, ಮತ್ತೆ ಅವಳಿಗೆ) ಈಗ ನನ್ನೇ ನೋಡು, ಸೀತಾ. ನಮ್ಮಮ್ಮ ಸತ್ತಾಗ ನಾನು ಆರು ತಿಂಗಳ ಬತ್ತಿ . . ಆದರೆ ನಾನು ಅತ್ತನೇ? (ಉಹ್ಞೂ ಅನ್ನುವಂತೆ ತಾನೇ ಮುಖವಲ್ಲಾಡಿಸಿ) ಇನ್ನು ನಮ್ಮಪ್ಪ . . . ಅವರು ಗೊಟಕ್ ಅಂದಾಗಲೋ . . . ನಾನು ಎಂಟು ವರ್ಷದ ಪೋಕರಿ . . . ಊರಾಚೆ ಯಾರದ್ದೋ ತೋಪ್ನಲ್ಲಿ ನಿಂತು, ಮಾವಿನ ಮರಕ್ಕೆ ಕಲ್ಲು ಬೀಸ್ತಿದ್ನಂತೆ! ನನಗೇ ನೆನಪಿಲ್ಲ. ಯಾರು ಬಂದು, ಎಷ್ಟು ಕರೆದರೂ ಚಡ್ಡೀ ಜೇಬಿರಡರ ತುಂಬಾ ಮಾವಿನ ಮಿಡಿಗಾಯಿ ತುಂಬೋವರೆಗೂ . . . ಝುಪ್ಪಯ್ಯ ಅನ್ಲಿಲ್ಲ . . . ಕಲ್ಲು ಹೊಡೀತಾನೇ ಇದ್ದೆ, ನನ್ನ ಹೊಡೆಯೋ ಒಬ್ಬ ಅಪ್ಪನೇ ಹೋದ್ಮೇಲೆ ಇನ್ನೇನಿದೆ ಈ ಜಗತ್ನಲ್ಲಿ ಅಂತಾ! (ಸೀತಮ್ಮ ತಡೆಯಲಾರದೇ ಹುಸಿನಗೆ ನಗುವಳು.) ನನ್ನ ಧೃತೀನ ಕಂಡು ಊರಿಗೆ ಊರೇ ಕೊಂಡಾಡಿತಂತೆ, ಸೀತಾ! (ಸೀತಮ್ಮನಲ್ಲಾದ ಬದಲಾವಣೆಯನ್ನು ಕಂಡು) ಹಾಗೆ! . . . ಏನೇ ಬರಲಿ, ಒಂದೇ ತರಹ ನಗೋದ್ನ ಕಲಿತ್ಕೋಬೇಕು ನೋಡು . . . 'ಸುಖದುಃಖೇ ಸಮೇ ಕೃತ್ವಾ' ಅಂದ ಹಾಗೆ. (ನಯವಾಗಿ) ಈಗ ಕೇಳು ಇಲ್ಲಿ . . . ಮುಂದಿನದಕ್ಕೆ, ಏನು ಏರ್ಪಾಡೂ?

ಸೀತಮ್ಮ—ಮತ್ತೇನು? ಹೇಗಿದ್ರೂ ಶಾಸ್ತ್ರಿಗಳಿಗೆ ಹೇಳಿಕಳಿಸಿದೆ. ಆಮೇಲೆ ಪಾತೂಗೂ ಪಾತೂ ಯಜಮಾನ್ರಿಗೂ ಹೇಳಿಕಳಿಸಿಬಿಟ್ಟು . . . ಕರ್ಮಕ್ರಿಯೆಗಳೆಲ್ಲಾ ಸಾಂಗವಾಗಿ ನೆರವೇರೋ ಹಾಗೆ ನೋಡ್ಕೋಬೇಕು. ಪಾಪ! 'ಸಾಯೋಕ್ ಮುಂಚೆ ಒಂದು ಸಲ ಕಾಶೀನ ಕಣ್ಣಾರೆ ಕಂಡು, ಗಂಗೇಲಿ ನೆತ್ತಿ ನೆನೆಯೋವರೆಗೂ ಮುಳುಗು ಹಾಕಿ

ಬರ್ಬೇಕು' ಅಂತ ಆಸೇ ಪಟ್ಟಿದ್ರು. ಹೇಗಾದ್ರೂ ಮಾಡಿ ಗಂಗೇಗೂ ಸಂಚಯನಕ್ಕೆ ಕಳಿಸಿಕೊಡಬೇಕು, ಅಸ್ತೀನಾ.

ಗುಂಡಪ್ಪ—ಏರ್ಪಾಡೂ ಅಂದರೆ ಅಸ್ತೀದಲ್ವೇ . . . ಆಸ್ತೀದು. ಎಷ್ಟಿದೆ? ಏನು ? ಹೇಗೆ ವಿಲೇವಾರೀ ಅಂತ ?

ಸೀತಮ್ಮ—ಅಯ್ಯೋ, ಅದಕ್ಕೇನೂಂದ್ರೆ ಅವಸರ ? ದಿನ ಕಳೀಲಿ, ಕರ್ಮಗಳೆಲ್ಲ ತೀರಲಿ . . . ಆಮೇಲೆ ಪಾತು, ಪಾತೂ ಯಜಮಾನ್ರು, ನೀವು ಸೇರಿ ಹೇಗೆ ನಿಷ್ಕರ್ಷೆ ಮಾಡ್ತೀರೋ ಹಾಗಾಗ್ಲಿ . . . ಸಂದೇನಿದೆ ಅದರಲ್ಲಿ ?

ಗುಂಡಪ್ಪ—ನಿಂದೇನಿದೆ ? (ಬಂದ ಕೋಪವನ್ನು ಮರೆಮಾಚಿ, ನಗುತ್ತ) ಹ್ಹಹ್ಹಹ್ಹ . . . ಚೆನ್ನಾಯ್ತು ! ಇದೇನ್ ಹೀಗ್ ಮಾತನಾಡ್ತೀ ಸೀತಾ ? ನೀನ್ ಯಾವಾಗ್ಲೂ ಹೀಗೇ ನೋಡು ! ನಿಸ್ವಾರ್ಥ ಮೂರ್ತಿ ! ಸಾಕ್ಷಾತ್ ಸೀತಾದೇವೀನೇ ! ನಿಂದಾಗಿ ಏನನ್ನೂ ನೀನ್ ಅಪೇಕ್ಷಿಸೋಲ್ಲ. ನಾನ್ ಕೆಟ್ಟರೂ ಚಿಂತಿಲ್ಲ, ಇನ್ನೊಬ್ಬರು ಸುಖವಾಗಿರಲಿ ಅನ್ನೋ ದೊಡ್ಡತನ ನಿಂದು. ಎಲ್ಲೋ ಅಪ್ಪಿತಪ್ಪಿ ಕಲಿಯುಗದಲ್ಲಿ ಹುಟ್ಟಿದೆ ಸೀತಾ, ನೀನು. ತ್ರೇತದಲ್ಲೋ, ದ್ವಾಪರದಲ್ಲೋ ಅವತರಿಸಬೇಕಾಗಿತ್ತು ! (ಸೀತಮ್ಮ ಹೊಗಳಿಕೆಗೆ ನಾಚುವಳು.) ಆದರೆ . . . ಇದು ಸ್ವಲ್ಪ ಯೋಚನೆಮಾಡ ಬೇಕಾದ ವಿಷಯ, ಸೀತಾ . . . ನಿನಗಾಗ್ ಅಲ್ಲ . . . ನನಗಾಗೂ ಅಲ್ಲ . . . ಮಗೂ ಸುಬ್ಬೂಗೋಸ್ಕರ . . . ನಾಳೆ ಹುಟ್ಟೋ ಅವನ ಮಕ್ಕಳು ಮೊಮ್ಮಕ್ಕಳಿಗೋಸ್ಕರ. ನಮ್ಮ ಧರ್ಮ, ನಮ್ಮ ತ್ಯಾಗಕ್ಕೆ ಅವರ ಹಿತಾನ್ನ ಬಲಿಗೊಡೋದು ಯಾವ ನ್ಯಾಯ ? ದೇವರು ಮೆಚ್ಚ್ತಾನೆ? (ಪಶ್ಚಾತ್ತಾಪದ ಸ್ವರದಲ್ಲಿ ಮುಂದುವರಿಸಿ) ಯಾವುದೋ ದರಿದ್ರ ಗಳಿಗೇಲಿ ನಾನು ನಿನಗೆ ಗಂಟುಬಿದ್ದೆ. ನಿನಗೆ ನಾನು ಏನು ಸುಖಾ ಕೊಟ್ಟೆ, ಸೀತಾ ? ನನ್ನ ಈ 40-2-60-Efficiency Bar-3-90 ರ ಗುಮಾಸ್ತಗಿರೀಲಿ ನಿನಗೆ ಒಂದು ಓಲೆಯೇ ? ಒಂದು ಮೂಗುಬೊಟ್ಟೇ ? ಒಂದು ಬಳೆಯೇ ? ಹೋಗಲಿ, ಕೊನೇ ಪಕ್ಷ . . . ವರ್ಷಕ್ಕೊಂದು ಜತೆ ಒಳ್ಳೇ ಸೀರೆಯೇ ? ಇನ್ನೂ . . . ಇದ್ದ ನಿನ್ನ ಚೂರೂಪಾರನ್ನೂ

ಆಗ ಈಗ, ಕಷ್ಟಕಾಲದಲ್ಲಿ ಕಸಿದು, ಗಿರವಿ ಇಟ್ಟಿದ್ದಾಯ್ತು . . . ನೆನಸಿಕೊಂಡರೆ ನಸಗೇ . . .

ಸೀತಮ್ಮ—ದಮ್ಮಯ್ಯ . . . ಹಾಗೆಲ್ಲಾ ಅಸ್ಕೋಬೇಡೀಂದ್ರೆ . . . ನಂಗೆ ಸಂಕಟವಾಗುತ್ತೆ.

ಗುಂಡಪ್ಪ—ಈಗ ನೇರವಾಗಿ ಕೇಳಿಬಿಡ್ತೀನಿ, ಸೀತಾ. ಸುಮ್ಮನೇ ಸುತ್ತು ಬಳಸೇಕೆ? ನಿನ್ನ ತಂಗಿ ಪಾತೂ . . . ಬಾಬಾ ಅಂಚಿನ ಧರ್ಮಾವರದ ಸೀರೆ ಉಟ್ಟು, ಕಿವೀಲಿ ಹತ್ತು ಹರಳಿನ ವಜ್ರದ ಓಲೆ ತೊಟ್ಟು, ಪಾವು ಅಚ್ಚೇರು ತೂಗೋ ಕಾಸಿನ ಸರಾನ್ನ ಕತ್ನಲ್ಲಿ ಕುಣಿಸ್ತಾ, ಕಣ್ಣು ಕೋರೈಸೋ ಹಾಗೆ ಓಡಾಡೋವಾಗ . . . ಎಷ್ಟು ದಿನ ನೀನು ಕತ್ನಲ್ಲಿ ಅರಶಿನದ ಕೊನೇಗೆ ಗಂಟು ಹಾಕಿದ ಕರೀಮಣಿ ಸರ, ಕೈಗೆ ಗಾಜಿನ ಬಳೆ ಹಾಕ್ಕೊಂಡು ಜಿಚ್ಚೋಲೆ ಗೌರಮ್ಮನ ಹಾಗೆ ಇರ್ತೀ? ಅವಳ ಮಗ ಓಡಾಡೋದು ಲೇಟೆಸ್ಟ್ ಮಾಡಲ್ ಷವರ್ಲೇಲಿ. ನಿನ್ನ ಮಗ? . . . ನಾನು ಇಪ್ಪತ್ತು ವರ್ಷ ಉಪಯೋಗಿಸಿ ಬತ್ತಲಾರದೇ ಬಿಟ್ಟು ಕೊಟ್ಟ ಹಡಾಸ್ ರ್‍ಯಾಲೀಸ್‌ಲಿ. ಇದು . . . ನಿಂಗೆ ಚೆನ್ನವೇ ಹೇಳು.

[ಸೀತಮ್ಮ ಏನು ಹೇಳಲೂ ತೋಚದೆ ಕಕ್ಕಾಬಿಕ್ಕಿಯಾಗುವಳು.]

ಗುಂಡಪ್ಪ—(ಒತ್ತಾಯದ ಧ್ವನಿಯಲ್ಲಿ) ಹೇಳೂ ಅಂದೆ.

ಸೀತಮ್ಮ—ಅದೇನೋ ನಿಜ . . . ಆದರೆ ನನ್ನ, ಏನು ಮಾಡೂ ಅಂತೀರಿ ಈಗ.

ಗುಂಡಪ್ಪ—ಹಾಗೆ ಬಾ. ನಾ ಹೇಳಿದ ಹಾಗೆ ಕೇಳ್ತೀಯೋ? ಇವತ್ತಿಂದ ಹದಿಮೂರೇ ದಿನ. ವೈಕುಂಠ ಸಮಾರಾಧನೆ ಕಳೆದ ಮಾರನೇ ಬೆಳಗ್ಗೆ ಹೊತ್ಗೆ . . . ನಿನ್ನ ಬಣ್ಣವೇ ಬದಲಾಗಿರ್ಬೇಕು. ಈಗ ಇಲ್ಲಿ ಸತ್ತು ಬಿದ್ದಿರೋ ನಿಮ್ಮಪ್ಪನೇ ಮತ್ತೆ ಹುಟ್ಟಿ ಬಂದರೂ . . . ಅವನಿಗೇ ನಿನ್ನ ಗುರುತು ಸಿಗಬಾರದು. ಹಾಗೆ ಮಾಡಿಬಿಡ್ತೀನಿ, ನಿನ್ನಾ. ಒಪ್ಪಿಗೆಯೋ?

[ಸೀತಮ್ಮ ಒಪ್ಪಿಗೆ ಎನ್ನುವಂತೆ ನಗುವಳು.]

ಗುಂಡಪ್ಪ—ಈಗ ಕೇಳು ಇಲ್ಲಿ . . . ನಿಮ್ಮಪ್ಪ ಈ ಮನೇಗ್ ಬಂದಾಗ ತಂದ ಸಾಮಾನ್ ಏನೇನು ಹೇಳು.

ಸೀತಮ್ಮ—ಒಂದು ಹಂಡೆ . . . ಒಂದು ತಾಮ್ರದ ಬಿಂದಿಗೆ . . . ಎರಡು ಸೇರು ಬೇಯೋ ತಪ್ಪಲೆ . . . ಒಂದು ಅರಕಿನ ಚೆಟ್ಟಿ . . .

ಗುಂಡಪ್ಪ—ಮುಖ್ಯವಾದ್ದ್ ಹೇಳೇ ಅಂದ್ರೆ ತೆಗೆದ್ಯಲ್ಲ. ಕೆಲಸಕ್ಕೆ ಬಾರದ್ನ . . . ತಪ್ಪಲೇ ಚೆಂಬು ಅರಕಿನ ಚೆಟ್ಟಿ ಅಂತ. ಅದಕ್ಕೇ ಅನ್ನೋದು . . . ಪಾತ್ರೇಗ್ ಹುಳಿ ಹಚ್ಚೋ ಬುದ್ಧಿ ಅಂತ!

ಸೀತಮ್ಮ—ಒಂದು ಕಬ್ಬಿಣದ ಪೆಟ್ಟಿಗೆ . . .

ಗುಂಡಪ್ಪ—ಹ್ಞೂ, ಒಂದ್ ಕಬ್ಬಿಣದ ಪೆಟ್ಟಿಗೇ . . . ಹೇಳು, ಅದರಲ್ಲಿ ಏನೇನಿದೆ ಅಂತಾ.

ಸೀತಮ್ಮ—ಅವೆಲ್ಲಾ ನನಗೇನ್ ಗೊತ್ತೂ ಅಂದ್ರೆ?

ಗುಂಡಪ್ಪ—ನಿನಗೆ ಗೊತ್ತು ಅಂತ ಅಲ್ಲಾ, ಸೀತಾ. ಆದರೂನೂ . . . ಸ್ತ್ರೀ ಸಹಜವಾದ ಕುತೂಹಲ! ನಿಮ್ಮಪ್ಪ ಅಪರೂಪವಾಗಿ ಯಾವಾಗ ಲಾದರೂ ಬೀಗದ ಕೈ ಮರೆತು ಹೊರಗೆ ಹೋದ ಹೊತ್ನಲ್ಲಿ . . . ಮನೇಲಿ ಬೇರೆ ಯಾರೂನೂ ಇಲ್ಲದೇ, ಸಂದರ್ಭಾನೂ ಅನುಕೂಲ ವಾಗಿದ್ದು . . . ಕಬ್ಬಿಣದ ಪೆಟ್ಟಿಗೆ ಒರಸ್ತಾ, ಒರಸ್ತಾ . . . ಹಾಗೇ ಮನಸ್ಸು ತಡೀಲಾರದೆ. . . ಒಂದು ಸಲ ತೆಗೆದು . . . ಕಣ್ಣಾಡಿಸಿರ ಬಹುದೇನೋ ಅಂತಾ. ತಪ್ಪೇನಿಲ್ಲ ಆದರಲ್ಲಿ . . . ನಿನ್ನ ಅನುಕೂಲ ಇದ್ದರೆ ಯಾರು ಮಾಡ್ತಿರಲಿಲ್ಲ ಹಾಗೇ!

[ಸೀತಮ್ಮ ತಪ್ಪಿತಸ್ಥಳಂತೆ ನಾಚುವಳು.]

ಗುಂಡಪ್ಪ—ಹೇಳು, ಹೇಳು . . . ಪರವಾಗಿಲ್ಲ. ನಾನೇನೂ ಅನ್ನೋಲ್ಲ (ಕಣ್ಣು ಹೊಡೆಯುವನು).

ಸೀತಮ್ಮ—(ತಲೆತಗ್ಗಿಸಿ ನಾಚಿಕೆಯ ಧ್ವನಿಯಲ್ಲಿ) ನಮ್ಮಮ್ಮ ಇದ್ದಾಗ ಹಾಕ್ಕೊ ತಿದ್ದ ಒಂದು ಜತೆ ವಜ್ರದ ಓಲೆ . . .

ಗುಂಡಪ್ಪ—(ಕಣ್ಣರಳಿಸಿ ಕೈ ಬೆರಳಿನಿಂದ ಎಣಿಸುವನು) ಊ್ಞ . . . ಒಂದು ಜತೆ ವಜ್ರದ ಓಲೇ.

ಸೀತಮ್ಮ—ಕೆಂಪೂ ಪಚ್ಚೆ ಜಡೇಬಿಲ್ಲೆ . . .

ಗುಂಡಪ್ಪ—ಕೆಂಪೂ ಪಚ್ಚೆ ಜಡೇಬಿಲ್ಲೇ!

ಸೀತಮ್ಮ—ಮೂಗುಬೊಟ್ಟು . . .

ಗುಂಡಪ್ಪ—ಮೂಗುಬೊಟ್ಟೂ!

ಸೀತಮ್ಮ—ನಾಲ್ಕೆಳೇ ಅವಲಕ್ಕೀ ಸರ . . .

ಗುಂಡಪ್ಪ—ನಾಲ್ಕೆಳೇ ಅವಲಕ್ಕೀ ಸರ!

ಸೀತಮ್ಮ—ಒಂದು ಅಡ್ಡಿಕೆ . . .

ಗುಂಡಪ್ಪ—ಒಂದು ಅಡ್ಡಿಕೇ!

ಸೀತಮ್ಮ—ಮೂರು ಪಾವು ತೂಗೋ ಡಾಬು . . .

ಗುಂಡಪ್ಪ—ಮೂರು ಪಾವು ತೂಗೋ ಡಾಬೂ!

ಸೀತಮ್ಮ—ಅವರದ್ದೇ ಒಂದು ಜತೆ ಹತ್ತಕಡಕು. ಮೂರು ಉಂಗುರ . . . ಅದರಲ್ಲೊಂದ್ ವಜ್ರದ್ದು . . .

ಗುಂಡಪ್ಪ—ಸಾಕೆ? ಸಾಕೆ? ನಿಮ್ಮಪ್ಪಂಗಿರೋ ಆಸ್ತೀ ಹಳೇ ರಾಜಮಹಾರಾಜರ ಹತ್ತಿರ ಇರೋಲ್ವಲ್ಲೇ? ಎಷ್ಟೇ ಆದರೂ, ಸಂಬಳಕ್ಕೆ ಹತ್ತುಪಟ್ಟು ಸಂಪಾದನೆ ಇದ್ದ ಕಾಲದಲ್ಲಿ ದುಡಿದು ಬೆಳೆದ ಗುಮಾಸ್ತಜೀವ! ಈಗೇಸಿದೆ ಹಾಳು? ಗೋಪಾಳ! ಈ Anti-corruption ಅಂತ ಬಂದು, ನಮ್ಮಂಥ ಬಡವರು ಹಾಳಾದ್ರು! ಕೆಲಸ ಮಾಡಸ್ಕೊಳೋಕ್ಕೆ ಅಂತ ಬರೋರು 'ಬೇ-ಡ್ರೆಸ್' ಕಾನಸ್ಟೇಬಲ್ ಕರಕೊಂಡು ಬಂದಿರ್ತಾರೆ. ಆ ಕಾನಸ್ಟೇಬಲ್ ಮೇಲೆ ಕಣ್ಣಿಡೋಕೆ ಹಿಂದೊಬ್ಬ ದಫೇದಾರಾ . . . ಅವನ ಹಿಂದೊಬ್ಬ ಇನ್ಸ್‌ಪೆಕ್ಟರು . . . ಎಲ್ಲಾ ಮತ್ಸ್ಯನ್ಯಾಯ! ಹೋಗಲೀ . . . ಈಗ ಒಡನೆಗಳಾಯ್ತು . . . ದುಡ್ಡೆಷ್ಟಿದೆಯೆ?

ಸೀತಮ್ಮ—ಹೋದ ವರ್ಷ ಮನೇ ಮಾರಿ ಬಂದದ್ದೆಲ್ಲಾ ಪೆಕ್ರ್ಷ ಜೊತೇಗೆ ಸೇರಿಸಿ ಪೋಸ್ಟಾಫೀಸಿನಲ್ಲಿಟ್ಟಿರಬೇಕು. ಲೆಕ್ಕಾಪತ್ರಗಳೆಲ್ಲಾ ಬೇಕಾದಷ್ಟಿವೆ . . . ಕನ್ನಡದಲ್ಲಿದ್ದಿದ್ರೆ ನಾನೂ ಓದ್ಕೊಂಡಿರ್ತಿದ್ದೆ!

ಗುಂಡಪ್ಪ—ಸರಿ, ಎಲ್ಲಿ ಹೋಗುತ್ತೆ . . . ನಿಧಾನವಾಗಿ ನೋಡೋಣ. ಈಗ ಹೀಗೆ ಮಾಡೋಣ . . . ಬೀಗದ ಕೈ ದಿಂಬಿನ ಕೆಳಗೆ ಇರಬೇಕು,

ಅಲ್ವೇ? ಆ ಕಬ್ಬಿಣದ ಪೆಟ್ಟಿಗೇನ ತೆಗೆದು ಒಳಗಿಂದೆಲ್ಲಾ ಖಾಲೀ ಮಾಡಿಬಿಡೋಣ. ಅವುಗಳ ಬದಲು, ಅವರದ್ದೇ ಕೆಲಸಕ್ಕೆ ಬಾರದ ಹಳೇಪಳೇದೇನಾದ್ರೂ ಇದ್ರೆ ತುಂಬಿಬಿಡೋಣ. ಸ್ವಲ್ಪವೂ ಅನುಮಾನ ಬರಬಾರದು ನೋಡು. ನಾಳೆ... ಅಷ್ಟಕ್ಕೆ ಬಂದರೆ... ತೊಗೊಂಡ್ ಹೋಗಲಿ, ನಿನ್ನ ತಂಗೀ ತಂಗೀ ಗಂಡ . . . ಆ ಕಬ್ಬಿಣದ ಪೆಟ್ಟಿಗೇನಾ!

[ಸೀತಮ್ಮ ಆತಂಕ ಅನುಮಾನಗಳನ್ನು ವ್ಯಕ್ತಪಡಿಸುವಳು.]

ಗುಂಡಪ್ಪ—(ಅಷ್ಟೇ ಆತಂಕದಿಂದ) ಯಾಕೇ? ಅನುಮಾನಸ್ತಿದೀ?

ಸೀತಮ್ಮ—(ತಲೆತಗ್ಗಿಸಿ, ನಿಧಾನವಾಗಿ) ಆ ಕಬ್ಬಿಣದ ಪೆಟ್ಟಿಗೇ . . . ಮುದ್ದಾಗಿ ಚೆನ್ನಾಗಿದೆ ಅಂದ್ರೇ. ಅದ್ಯಾಕೋ ಅದನ್ನ ಅವರು ತಂದಾಗಿನಿಂದ ನನಗೆ ಅದರ ಮೇಲೆ ಮನಸ್ಸು ನೋಡೀ. ಅದರೊಳಗಿರೋ ಅಷ್ಟು ಒಡವೇನೇ ನಾವು ಇಟ್ಟುಕೊಳ್ಳೋವಾಗ... ಅದೊಂದು ಪೆಟ್ಟಿಗೇಲಿ ಇವತ್ತೆಲ್ಲಾ ಏನಾಗುತ್ತೆ ಹೇಳಿ.

ಗುಂಡಪ್ಪ—(ಡಂಗು ಬಡಿದು) ಲ್ಹ್ಣ . . . ಪರವಾಗಿಲ್ಲ . . . ಏನೋ ಅಂತಿದ್ದೆ! ನಾನು ಇಷ್ಟೊತ್ತು ಗಂಟಲು ಬಿದ್ದುಹೋಗೋ ಹಾಗೆ ಹೊಡ್ಕೊಂಡದ್ದಕ್ಕೂ ಸಾರ್ಥಕವಾಯ್ತು! (ಯೋಚಿಸುತ್ತ) ಕಬ್ಬಿಣದ ಪೆಟ್ಟಿಗೆ? ಊ್ಣ . . . ಯೋಚಿಸೋಕ್ಕೆ ತಲೇ ಇದ್ದರೆ ಯಾವುದಕ್ಕೆ ಇರೋಲ್ಲ ಪರಿಹಾರ? (ಕ್ಷಣಕಾಲ ಬಿಟ್ಟು) ಸರಿ, ಅದು ಇರೋ ಕೋಣೇಗೆ ಭದ್ರವಾಗಿ ಬೀಗ ಹಾಕ್ಬಿಟ್ಟು, ನಮ್ಮ ಬಟ್ಟೆ ಇಡೋ ಬೀರೂ ಇದ್ಯಲ್ಲೇ . . . ಜಾಯಿಕಾಯಿ ಮರದ್ದು . . . ಅದನ್ನ ತಂದು ಸತ್ತ ಹೆಣದ ತಲೇ ಬದೀಲಿಟ್ಟು . . . ನಿನ್ನ ತಂಗಿ ಕೇಳಿದ್ರೆ . . . 'ಕಬ್ಬಿಣದ ಪೆಟ್ಟಿಗೇನ ಆಗಲೇ ಮಾರ್ಬಿಟ್ರೂ . . . ಎಷ್ಟೇ ಬೇಡ ಅಂದರೂ ಕೇಳ್ಲಿಲ್ಲ' ಅಂತ ಅಂದು ಬಿಡೋಣ. ಗೊತ್ತಾಯ್ತೆ? ಏಳು, ಬೇಗ ಮುಗಿಸಿ ಬಿಡೋಣ. ನೋಡು . . . ಅಂದ್ಹಾಗೆ ಮರತಿದ್ದೆ . . . ಒಂದು ಗಜ ಬಿಳೀ ಕಾಗದಾನೂ ಇಂಕ್‌ಪ್ಯಾಡ್‌ನೂ ತೊಗೋ . . .

ಆ ಸತ್ತ ಹೆಣದ್ದು ಒಂದು ಹೆಬ್ಬೆಟ್ಟಿನ ಗುರುತು ತೊಗೊಂಡಿರೋಣ . . . ಸಮಯಕ್ಕೆ ಬೇಕಾಗುತ್ತೆ!

ಸೀತಮ್ಮ—(ಅಂಜಿ) ಮುಂದೇನೂ ತೊಂದರೆ ತಾಪತ್ರಯಕ್ಕೆ ಇಟ್ಟುಕೊಳ್ಳೋಲ್ಲವೇಂದ್ರೇ ? ಪರವಾಗಿಲ್ಲ ಅಂತೀರಾ ?

ಗುಂಡಪ್ಪ—ಸೀ ತೊಗೊಂಬಾ ಹೇಳ್ತೀನಿ. ಇದೇನು ನನಗೆ ಹೊಸದೇ ? ಜಗತ್ತಿಗೆ ಹೊಸದೇ ?

[ಸೀತಮ್ಮ ಒಳಹೋಗುವಳು.]

ಗುಂಡಪ್ಪ—(ಮಂಚದ ಬಳಿ ಹೋಗಿ) ಎಲ್ಲಿಂದ ಶುರು ಮಾಡೋಣ ? (ಒಂದು ಸಲ ಎಲ್ಲವನ್ನೂ ಅವಲೋಕಿಸಿ, ಮಂಚದ ಮುಂದಿರುವ ಜಡಾವನ್ನು ಕೈಗೆತ್ತಿಕೊಂಡು ರಂಗದ ಮುಂದೆ ಬಂದು) ಅಲ್ಲಾ, ಧರ್ಮಕರ್ಮಸಂಯೋಗ ಅನ್ನೋಕ್ಕೆ ಹೇಳ್ತೀನಿ . . . ಬೆಳಗ್ಗೆ ಎದ್ದೇಟ್ಗೆ ನನ್ನ ಗಡಗಿನ ಚಪ್ಪಲಿ ಹರಿದು, ಅದರ ಉಂಗುಷ್ಟ ಹಾಕಿಸೋಕ್ಕೆ ಬೇಕಾದ ಎರಡೂವರಾಣೆಗೆ ಹೇಗಪ್ಪಾ ಅಂತ ನಾನು ತಲೆ ಕೆರಕೊಳ್ಳೋದಕ್ಕೂ, ಅಷ್ಟು ಹೊತ್ತಿಗೆ ಸರಿಯಾಗಿ ಭಗವಂತ ದೊಡ್ಡ ಮನಸ್ಸು ಮಾಡಿ ನಮ್ಮ ಮಾವನವರನ್ನ ತನ್ನ ಪಾದಕ್ಕೆ ಕರಕೊಂಡು ಅವರ ಈ ಪಾದರಕ್ಷೇನ ನನಗೆ ದಯ ಪಾಲಿಸೋಕ್ಕೂ . . . ಅಷ್ಟಲ್ಲದೇ ಹೇಳ್ತಾರೆಯೇ, ದೇವರಿದಾನೆ ಅಂತ ! (ಜಡಾವನ್ನು ಕೊಟ್ಟು ಅತ್ತಿಂದಿತ್ತ ಒಂದು ಸಲ ಗಂಭೀರವಾಗಿ ಓಡಾಡಿ) ಸ್ವಲ್ಪ ಅಳ್ಳಕ . . . ಆದರೇನಂತೆ? ಇನ್ಮೇಲೆ ನನಗೂ ಸ್ವಲ್ಪ ಮೈಕೈ ತುಂಬ್ಕೊಂಡು, ಬರಬರ್ತಾ ಸರಿಹೋಗುತ್ತೆ ಅಂತ ಅನ್ನಿಸತ್ತೆ! (ಮತ್ತೆ ಮಂಚದ ಬಳಿಗೆ ಹೋಗಿ, ಇನ್ನೊಮ್ಮೆ ಕಣ್ಣಾಡಿಸಿ, ಶಾಲಿಗೆ ಕೈಹಾಕ ಹೋದವನು ಸ್ವಲ್ಪ ಹಿಂಜರಿದು, ಮತ್ತೆ ಧೈರ್ಯಮಾಡಿ) ಹೆಣದ ಮೈಲಿಗೆ ಅಂತ ಹೆದರಿ ಕೂತರೆ ಆಗುತ್ಯೆ ? ಬಿಟ್ಟರೆ . . . ಇದಿನ್ನು ಅಗಸರವನ ಸ್ವತ್ತು ! . . . (ಹೊದಿಸಿದ ಶಾಲನ್ನು ತೆಗೆದು ಬೆಳಕಿಗೆ ಹಿಡಿದು ನೋಡಿ) ಸೊಗಸಾದ ಶಾಲು ! . . . ಈ ಬೆಂಗಳೂರ ಚಳೀಗೆ ಮಾಡಿಟ್ಟ ಹಾಗಿದೆ ! (ಹೊದ್ದು, ಒಂದು ಸಲ ಗಂಭೀರ ನಟಿಸಿ, ಹಿಂಬದಿಯ ಗೋಡೆಯ ಬಳಿ ಬೆಂಚಿನ ಮೇಲೆ ಪೇರಿಸಿಟ್ಟ ಹಾಸಿಗೆ-ಹೊದಿಕೆಗಳ ಮೇಲಿಂದ ತನ್ನ ಹಳೆಯ ಕರಿಯ ಕೋಟನ್ನು

ಕಂಬಳಿಯನ್ನು ಬಿಚ್ಚಿ ಹೆಣಕ್ಕೆ ಹೊದಿಸುತ್ತ, ಅಣಕದ ಧ್ವನಿಯಲ್ಲಿ) ನನ್ನ ಪ್ರಸ್ಥದಲ್ಲಿ ನೀವೇ ಕೊಟ್ಟ ಉಡುಗೊರೆ, ಮಾವಯ್ಯಾ! ಈಗ ನಿಮಗೇ ಅರ್ಪಿತ ವಾಗಲಿ! (ಹೊದಿಸುವನು. ಆಗ ಮಂಚದ ಮೇಲಿನಿಂದ ನಶ್ಯದ ಡಬ್ಬಿ ಕೆಳಕ್ಕೆ ಬೀಳುವುದು. ಗುಂಡಪ್ಪ ಥಟ್ಟನೆ ಅದನ್ನು ಕೈಗೆತ್ತಿಕೊಂಡು, ಅದರಿಂದ ಒಂದು ಚಿಟಿಕೆ ತೆಗೆದು ಮೂಗಿಗೆ ಏರಿಸುತ್ತ) ಘಾಟುಘಾಟಾಗಿ ಚೆನ್ನಾಗಿದೆ! ಬದುಕಿದ್ದಾಗ ಒಂದು ಸರ್ತಿಯಾದರೂ ಹೀಗೆ ಸಂತೋಷ ಕೊಡಬಾರದಾಗಿತ್ತೆ? (ಥಟ್ಟನೆ ನೆನಸಿಕೊಂಡು, ಜೋರಾಗಿ) ಸೀತೂ . . . ಯಾಕೆ ಸಿಗಲಿಲ್ಲವೆ? ಬಿಳೀ ಕಾಗದ, ಇಂಕ್ ಪ್ಯಾಡೂ? ಅಲ್ಲೇ ಬಲಗಡೇ ಎರಡನೇ ಖಾನೇಲಿರಬೇಕು ನೋಡು.

ಸೀತಮ್ಮ—(ಒಳಗಿನಿಂದ) ಹ್ಞೂ . . . ಸಿಕ್ತು . . . ತಂದೆ (ಕ್ಷಣಕಾಲ ಬಿಟ್ಟು, ಕಾಗದ ಇಂಕ್ ಪ್ಯಾಡ್ ಸಮೇತ ಬರುವಳು.)

ಗುಂಡಪ್ಪ—ಬೇಗ ಬೇಗ ಬಾ . . . ಶ್ರೋತೃಗಳು ಬರೋ ಹೊತ್ತಾಯ್ತು . . . ಮುಗಿಸಿಬಿಡೋಣ (ಇಬ್ಬರೂ ಮಂಚದ ಬಳಿಗೆ ಹೋಗುವರು. ಗುಂಡಪ್ಪ ಕಂಬಳಿಯನ್ನು ಸರಿಸಿ, ಮುದುಕನ ಎಡಗೈ ಅಷ್ಟನ್ನೇ ಹೊರತೆಗೆದು ಹೆಬ್ಬೆರಳಿಗೆ ಪ್ಯಾಡಿನ ಮಸಿ ಸವರಿ, ರಾಗವಾಗಿ ಕೋರ್ಟಿನ ವಾಕ್‌ಶೈಲಿಯಲ್ಲಿ) ಸಂಜನಗೂಡು ತಾಲ್ಲೂಕು, ಹೆಗ್ಗಡ್ಡಹಳ್ಳಿ ಗ್ರಾಮದ ತಿಮ್ಮಪ್ಪಯ್ಯನವರ ಜ್ಯೇಷ್ಠಪುತ್ರ ಲಕ್ಷ್ಮೀಪತಯ್ಯನವರು, ತಮ್ಮ ಹಿರಿಯ ಮಗಳು ಸೀತಾಲಕ್ಷ್ಮಿ ಹಾಗೂ ಅಳಿಯ ಘಾಟೀ ಗುಂಡಪ್ಪನಿಗೆ, ತಮ್ಮ ಅಂತ್ಯ ಕಾಲದಲ್ಲಿ, ಸ್ವಂತ ಇಚ್ಛೆಯಿಂದ, ಇಲ್ಲದ ಇಬ್ಬರು ಸಾಕ್ಷಿಗಳ ಸಮಕ್ಷಮ, ತಮ್ಮ ಸಮಸ್ತ ಚರಾಚರ ಆಸ್ತಿಯನ್ನೂ ಆಶೀರ್ವದಿಸಿ ಓದಿಸಿ ಬರೆದುಕೊಟ್ಟ ಉಯಿಲು ಪತ್ರಕ್ಕೆ ಹಾಕಿದ ಎಡಗೈ ಹೆಬ್ಬೆಟ್ಟಿನ ಗುರುತು! (ಕಾಗದಕ್ಕೆ ಹೆಬ್ಬೆಟ್ಟನ್ನು ಒತ್ತುವನು) ಹ್ಹಹ್ಹಹ್ಹ . . . ಅದೂ, ಬಲಪಾರ್ಶ್ವಕ್ಕೆ ಲಕ್ವಾ ಹೊಡೆದು, ರುಜು ಹಾಕಲು ಕೈ ಓಡದ ಕಾರಣಾ! (ಮತ್ತೆ ಮೊದಲಿನ ಧ್ವನಿಗೆ ಹಿಂದಿರುಗಿ) ಇನ್ನು ಯಾವ ಹಕ್ಕುದಾರರು ಬರ್ತಾರೋ ಬರಲಿ . . . ನೋಡೋಣ (ಕಾಗದವನ್ನು ಮಡಿಸಿ ಒಳಜೇಬಿಗೆ ಸೇರಿಸುತ್ತ) ನಡಿ, ನಡಿ . . . ಇನ್ನು ಕಬ್ಬಿಣದ ಪೆಟ್ಟಿಗೆ ಖಾಲೀ ಮಾಡೋದೊಂದು ಉಳಿದಿದೆ.

(ಮುಂದಿನ ಬಾಗಿಲನ್ನು ಹಾಗೆಯೇ ಮುಚ್ಚಿ ಒಳಹೊರಟಿರುವಾಗ, ಟೀಪಾಯ್ ಮೇಲಿನ ಅಲಾರಂ ಗಡಿಯಾರ ಕಣ್ಣಿಗೆ ಬಿದ್ದು) ಅವಸರದಲ್ಲಿ ಇಷ್ಟು ಒಳ್ಳೇ ಗಡಿಯಾರ ಮರೆತು ಬಿಟ್ಟಿದ್ದೆನಲ್ಲಾ! (ಒಂದು ಸಲ ಕಿವಿಗಿಟ್ಟು ನೋಡಿ. ಜೇಬಿಗೆ ಸೇರಿಸುವನು) ಸದ್ಯಕ್ಕೆ ಇಲ್ಲಿರಲಿ. (ಇಬ್ಬರೂ ಒಳಹೋಗುವರು.)

[ಕಾಲು ನಿಮಿಷ ರಂಗ ತೆರವಾಗಿರುವುದು. ಸುಬ್ಬು ಹೊರಗಿನಿಂದ ಪ್ರವೇಶಿಸುವನು.]

ಸುಬ್ಬು—(ಎತ್ತರದ ಧ್ವನಿಯಲ್ಲಿ) ಶ್ರೋತ್ರಿಗಳಿಗೆ ಹೇಳಿಬಿಟ್ಟು ಬಂದೇಣ್ಣಾ . . . ಬೇಗನೆ ಬರ್‍ತಾರಂತೆ. ಹಾಗೆ ಎಲ್ಲಾದಕ್ಕೂ ಅವರೇ ಅರೇಂಜ್ ಮಾಡ್ತಾರಂತೆ.

ಗುಂಡಪ್ಪ—(ಒಳಗಿನಿಂದಲೇ) ಆಫೀಸಿಗೆ ಫೋನ್ ಮಾಡಿದ್ಯಾ?

ಸುಬ್ಬು—ಹ್ಞೂ . . . ನಿಮ್ಮ ಸಾಹೇಬರೇ ರಿಸೀವ್ ಮಾಡಿದ್ರು . . . Condolences, ಅಲ್ಲಾ Congratulations . . . ಹೇಳು ಅಂತಂದರು!

ಗುಂಡಪ್ಪ—ಸರೀ . . . ಇವತ್ತೆಲ್ಲಾ ಎಲ್ಲೂ ಹೋಗ್ಬೇಡ. ಫ್ಯಾಕ್ಟರೀಗೂ ರಜಾ ತೊಗೋಳೋವಂತೆ. ಅಲ್ಲೇ ಬಾಗಿಲ ಹತ್ರಾನೇ ಕೂತಿರು . . . ಶ್ರೋತ್ರಿಗಳು ಬರೋದು ಕಂಡಾಕ್ಷಣ ನಮಗೆ ಹೇಳು . . . ತಿಳೀತೇ ?

ಸುಬ್ಬು—ಇದೊಳ್ಳೇ ಗೋಳ್ಕರೇ! ಈ ಮುದುಕರ ಬಾಳೇ ಇಷ್ಟೇ! ಇರೋವಾಗ್ಲೂ ತೊಂದರೆ . . . ಸತ್ಮೇಲೂ ತೊಂದರೇ. ಯಾರ ಕೈಲಾಗುತ್ತೆ, ಹೀಗೆ ಹೆಣಾ ಕಾಯೋಕ್ಕೆ? (ಅಸಮಾಧಾನದಿಂದ ಅತ್ತಿತ್ತ ಎರಡು ಸಲ ತಲಾಯಿಸುವನು. ಅಷ್ಟರಲ್ಲೇ ಹೊರಗಿನಿಂದ ಸಿಳ್ಳಿನ ಶಬ್ದ. 'Mr. Subba Rao' ಎಂದು ಕೂಗಿದ ಸದ್ದು. ಅದನ್ನು ಕೇಳಿ ಜೀವ ಬಂದವನಂತೆ) Ah! There comes the whistle . . . The Clarion-call of the Company, for ಕ್ಲಬ್ಬು, ಕಾಫಿ and ಕಾರ್ಡ್‌ಹರಟೇ! (ಹೊರಗಡೆಗೆ ಉತ್ತರ ಕೊಡುತ್ತ, ಜೋರಾಗಿ) ಒಂದ್ ಸೆಕೆಂಡ್, ಒಂದೇ ಕಣ್ರೋ! (ಮಂಚದ ಕಡೆ ನೋಡಿ) ಅಜ್ಜಾ, or no ಅಜ್ಜಾ . . . I don't care. I must have my funಉ (ಹೊರಗೆ ಹೊರಟಿದ್ದವನು, ಮತ್ತೆ ಮಂಚದ ಹತ್ತಿರ ಬಂದು ಕೈಯಿಂದ ಬೀಳ್ಕೊಡುವ ಸಂಜ್ಞೆ ಮಾಡುತ್ತಾ) Good Bye . . . Ta . . . Ta!

[ಸುಬ್ಬು ಹೋಗುವನು. ಒಂದು ಕ್ಷಣ ರಂಗದ ಮೇಲೆ ಯಾರೂ ಇಲ್ಲ. ಎಲ್ಲವೂ ನಿಶ್ಶಬ್ದ. ನಡುನಡುವೆ ಒಂದೆರಡು ಸಲ ಒಳಗಿನಿಂದ ಪೆಟ್ಟಿಗೆಗಳನ್ನು ಎಳೆದಾಡಿದ ಸದ್ದು ಕೇಳಿಬರುತ್ತದೆ. ಮತ್ತೆ ನೀರವ. ಮಂಚದ ಮೇಲಿನ ಕಂಬಳಿ ಸರಿದಾಡುತ್ತದೆ. ಮಲಗಿದ್ದ ವ್ಯಕ್ತಿ ಸ್ವಲ್ಪ ವಿಸುಕಾಡಿ, ಕಂಬಳಿಯನ್ನು ದೂಡಿ, ನಿಧಾನವಾಗಿ ಎದ್ದು ಕುಳಿತು, ಕಣ್ಣು ಹೊಸೆದು, ಭೀಕರತೆ ಹುಟ್ಟುವಂತೆ ಸುತ್ತ ನೋಡಿ, ಒಂದು ಸಲ ಮೈಮುರಿದು, ದೀರ್ಘವಾಗಿ ಆಕಳಿಸಿ, ಗಂಟಲು ಸರಿಮಾಡಿಕೊಂಡು . . .]

ಲಕ್ಷ್ಮೀಪತಿ—ಅಯ್ಯಯ್ಯಪ್ಪಾ . . . ಏನು ಔಷಧೀ ಅಂತ ಕೊಟ್ರೋ, ಆ ಡಾಕ್ಟ್ರು. 'ಎಂಟು ದಿನದಿಂದ ನಿದ್ರೆ ಸರಿಯಾಗಿಲ್ಲ . . . ಏನಾದ್ರೂ ಔಷಧೀ ಕೊಡಿ' ಅಂದ್ರೆ, ಅದೇನೋ ಕೊಟ್ಬಿಟ್ರು . . . ಎಂಥಾದ್ದೋ Sleeping Mixture ಅಂತೇ. ಮನೇ ಮುಟ್ಟೋತನಕ ಕುಡೀಬೇಡಿ ಅಂತೇನೋ ಅಂದ್ರು. ಆದರೂನೂ ಬಣ್ಣಕ್ಕೆ ಮನಸೋತು ಬಸ್ ಸ್ಟ್ಯಾಂಡಿನಲ್ಲೇ ಬಸಿಕೊಂಡದ್ದಾಯ್ತು. ದಾರೀಲೇ ತೂಕಡಿಕೆ . . . ಹಾಸಿಗೆ ಕಾಣೋದೇ ತಡ, ಒಳ್ಳೇ ಭರ್ಜರಿ ನಿದ್ರೆ. (ಮೈ ಮುರಿಯುತ್ತ) ಆ ನಿದ್ರೆ ಒತ್ತಿಗೆ ಮೈ ಕೈಯೆಲ್ಲಾ ಭಾರ . . . ಏನೋ ಕೆಟ್ಟ ಜಡ. ವಯಸ್ಸಾದ್ರೇ ಹೀಗೇ ನೋಡಿ. ನಿದ್ರೆ ಬಂದರೆ ಒಂದು ತರಹ ಹಿಂಸೆ . . . ಬಾರದಿದ್ದರೆ ಇನ್ನೊಂದು ತರಹ ಹಿಂಸೆ. (ಹಿಂದಿನ ಕಿಟಕಿ ಗಾಳಿಗೆ ಪಟ್ಟನೆ ಬಡಿಯುವುದು. ಎದ್ದು ಮೈ ನಡುಗಿಸುತ್ತ ಹೋಗಿ, ಅದನ್ನು ಮುಚ್ಚಿ ಬಂದು) ಏನು, ಇಷ್ಟೊಂದು ಗಾಳಿ ಇವತ್ತು? . . . ಹೊತ್ತೇರಿದ್ದರೂ ಇನ್ನೂ ಚಳಿ ಇಳಿದಿಲ್ಲ. (ಮತ್ತೆ ಮಂಚಕ್ಕೆ ಬಂದು, ನಿದ್ದೆಗಣ್ಣಿನಲ್ಲೇ ಅಲ್ಲಿದ್ದ ಕಂಬಳಿಯನ್ನು ತಡವಿ ತೆಗೆದು ಹೊದ್ದುಕೊಂಡು, ಹೊದ್ದಮೇಲೆ ಆ ಕಂಬಳಿಯ ಅರಿವಾಗಿ ಅದನ್ನು ಮೈಗೆರವಿದ ಹಾವಿನಂತೆ ಕಿತ್ತೊಗೆಯುತ್ತ) ಕರ್ಮ, ಕರ್ಮ! ಚೆನ್ನಾಗಿ ಜ್ಞಾಪಕವಿದೆ. ಮಲಗೋವಾಗ ನನ್ನ ಶಾಲು ಹೊದ್ಕೊಂಡು ಮಲಗಿದೀನಿ . . . ಏಳೋ ಹೊತ್ಗೆ ಆ ಶಾಲೇ ಮಾಯ . . . ಅದರ ಬದಲು ಈ ಕೊಳಕು ಕಂಬಳೀ. ದುರ್ನಾಥ! ಇನ್ಯಾರು ಬರಬೇಕು? ಎಲ್ಲಾ ಆ ಮಹರಾಯನ ಚೇಷ್ಟೆ! ಥೂಥೂಥೂಥೂಥೂಥೂ! ಮಾವಂಗೂ ಅಳಿಯಂಗೂ ಆಗ್ದೇ ಹೋದ್ಮೇಲೆ ಒಂದೇ ಮನೇಲಿರ ಬಾರದು . . . ಇರಬಾರದು ಅಂದೆ. ಆದರೇನ್ಮಾಡೋದು, ಅನುಭವಿಸ

ಬೇಕಲ್ಲ . . . ಎಲ್ಲಾ ಆ ಸೀತೂಗೋಸ್ಕರ. ಎಷ್ಟು ಸಲ ಹೇಳ್ದೆ: 'ಇಲ್ಲಿ ಬೇಡಮ್ಮಾ . . . ಹೇಗೂ ಒಂಟಿ ಮುದುಕ. ನನ್ನ ಪಾಡಿಗೆ ನಾನು ಕಾಶೀಗೋ ರಾಮೇಶ್ವರಕ್ಕೋ ಹೋಗಿ ಸನ್ಯಾಸ ತಗೊಂಡ್ ಇದ್ಬಿಡ್ತೀನಿ. ಅದರಿಂದ ನನಗೂ ಸುಖ, ನಿನ್ನ ಗಂಡಂಗೂ ಸುಖ' ಅಂತಾ. ಕೇಳಬೇಕಲ್ಲ. ಆ ಮಾತೆತ್ತೋಕ್ಕಿಲ್ಲ, ಅಳೋಕ್ಕೇ ಶುರು ಮಾಡಿಬಿಡ್ತಾಳೆ. (ಸುಸ್ತಾಗಿ ಕುರ್ಚಿಯ ಮೇಲೆ ಕುಕ್ಕರಿಸುತ್ತ) ವಯಸ್ಸಾಯ್ತು . . . ಜೀವ ತಡೆಯೋಲ್ಲ. ಇಂಥಾದ್ದೇನಾದ್ರೂ ಆದ್ರೆ, ನನಗೆ ತುಂಬಾ ಸುಸ್ತಾಗಿಬಿಡುತ್ತೆ . . . ಜೊತೇಗೆ ಎಲ್ಲೂ ಇಲ್ಲದ ಹಸಿವು ಬೇರೆ ಬಾಧಿಸುತ್ತೆ! (ಯೋಚಿಸುತ್ತ) ಬೆಳಗ್ಗೆ ಹೊಟ್ಟೇಗ್ ಏನು ಬಿದ್ದಿತ್ತು? ಸೀತೂ . . . ಕಾಫೀ ಜತೇಗೆ ಏನೋ ಕೊಟ್ಟಿದ್ದಲ್ವೇ? ಆಮೇಲೆ? ಗಾಳೀಸವಾರೀಗೆ ಹೋದಾಗ ದೋಸೆ ಗೀಸೆ ಏನಾದ್ರೂ ಆಗಿತ್ತೊ? ಮರವು . . . ಮರವು. ಅದು ಸರಿ . . . ಈಗ ಈ ಹಸಿವಿಗೆ ಏನು ಮಾಡೋದು? (ಒಳಮನೆ ಕಡೆ ನೋಡಿ, ಘ್ರಾಣಿಸುತ್ತ) ಯಾಕೆ? ಇಷ್ಟೊತ್ತಾದರೂ ಇನ್ನೂ ಒಗ್ಗರಣೆ ವಾಸನೆಯೇ ಬರ್ತಿಲ್ವಲ್ಲ? (ಜೋರಾಗಿ ಅಂಗಲಾಚುತ್ತ) ಸೀತೂ . . . ಅಡಿಗೆಯಾಗಿದ್ರೆ ನನಗೊಂದು ತುತ್ತು ಬಡಿಸಿಬಿಡಮ್ಮಾ . . . ಕಾಯಿಸಬೇಡ (ಉತ್ತರ ಬಾರದುದನ್ನು ಕಂಡು, ಒಳಮನೆಯ ಕಡೆ ಹೋಗಿ ಮುಚ್ಚಿದ ಬಾಗಿಲನ್ನು ಕಂಡು) ಓ . . . ಅಡಿಗೆ ಮುಗಿಸಿ ಎಲ್ಲೋ ಪಕ್ಕದ್ಮನೇಗೆ ಹೋಗಿ ಕೂತಿರಬೇಕು ಅಂತ ಕಾಣುತ್ತೆ. ಈಗ ಏನು ಮಾಡೋದು? (ರಂಗದ ಮುಂದಕ್ಕೆ ಬಂದು ಮೇಜಿನ ಮೇಲೆ ಗುಂಡಪ್ಪ ತಂದಿಟ್ಟಿದ್ದ ತರಕಾರಿಯ ಚೀಲವನ್ನು ಕಂಡು) ಓಹೋ! ಇಲ್ಲೇನೋ ಇದ್ದಾಂಗಿದೆ (ಕಳ್ಳನಂತೆ ಅತ್ತಿತ್ತ ನೋಡಿ, ಚೀಲವನ್ನು ತೆಗೆದು, ಅಲ್ಲಿನ ತರಕಾರಿಗಳೆಲ್ಲವನ್ನೂ ಮೇಜಿನ ಮೇಲಿಟ್ಟು, ಬುಡದಲ್ಲಿದ್ದ ಬಾಳೆಯ ಹಣ್ಣಿನ ಚಿಪ್ಪನ್ನು ಕೈಲಿ ಹಿಡಿದು, ಹಿರಿಹಿರಿ ಹಿಗ್ಗಿ) ಬಾಳೇಹಣ್ಣು! ಸದ್ಯಃ ಬದುಕ್ದೆ . . . ಇನ್ನು ಊಟದ ತನಕ ಭಯವಿಲ್ಲ. (ಒಂದು ಹಣ್ಣನ್ನು ಬಿಡಿಸಿ ಗಬಗಬನೆ ತಿನ್ನುತ್ತ) ಇನ್ನೂ ಒಂದು ಸ್ವಲ್ಪ ಮಾಗಿದ್ದರೆ ಆಗಿತ್ತೇನೋ! . . . ಆದರೂ ರುಚಿಯಾಗಿದೆ. (ತಿಂದು ಮುಗಿಸಿ) ಇದಿನ್ನು ಅಡಿಗೆ ಮನೆ ಸೇರಿದರೆ ಮುಗೀತು . . . ಅದರ ವಾಸನೆಯೂ

ನನ್ನ ತನಕ ಬರೋಲ್ಲ. ಯಾಕೆ ಒಂದೆರಡನ್ನು ತೆಗೆದಿಡಬಾರದು? ಸಂಜೇಗಾಗುತ್ತೆ! (ಚಿಪ್ಪಿನಲ್ಲಿ ಅರ್ಧವನ್ನು ಮುರಿದು) ಎಲ್ಲಿಡೋಣ? ಕಬ್ಬಿಣದ ಪೆಟ್ಟಿಗೆಯೇ ವಾಸಿ! (ಮಂಚದ ಹತ್ತಿರ ಹೋಗಿ ದಿಂಬಿನ ಕೆಳಗೆ ಕೈ ಹಾಕಿ. ಅಲ್ಲಿ ಬೀಗದ ಕೈ ಇಲ್ಲದುದನ್ನು ಕಂಡು ಗಾಬರಿಯಾಗಿ) ಹ್ಞಾ, ಇದೆಲ್ಲಿ ಹೋಯ್ತು, ಈ ಬೀಗದ ಕೈ? ಎಲ್ಲಿಟ್ಬಿಟ್ಟೆ? ವಯಸ್ಸಾಗ್ತಾ ಆಗ್ತಾ ಮರವು ಜಾಸ್ತಿ . . . ಜೊತೇಗೆ ಆ ಔಷಧದ ಅಮಲು ಬೇರೆ . . . ನಿದ್ದೆಗಣ್ಣಲ್ಲಿ ಎಲ್ಲಿಟ್ಬಿಟ್ನೋ? (ಸೊಂಟವನ್ನೂ ಜೇಬನ್ನೂ ಶೋಧಿಸಿ, ಸಿಗದೆ ಆತಂಕಗೊಂಡು, ಮತ್ತೆ ಮಂಚದ ಬಳಿ ಹೋಗಿ ಹೊರಬಾಗಿಲಿಗೆ ಬೆನ್ನು ಮಾಡಿ ನಿಂತು, ಮಂಚದ ಹಾಸಿಗೆ ಹೊದಿಕೆಗಳನ್ನೆಲ್ಲಾ ಕಿತ್ತು ಕೆದರಾಡುತ್ತಿರುವನು. ಆಗ ಮಡಕೆ, ಬಾಳೆಲೆ, ಬೊಂಬಿನ ಸಮೇತ ಶ್ರೌತಿಯ ಪ್ರವೇಶ.)

ಶ್ರೌತಿ—(ಡಂಗು ಬಡಿದು) ಅರೇ ಇದೇನು? ಸುಬ್ಬು ಬಂದು ಅಳಳ್ತಾ 'ಅಜ್ಜಾ ಹೋಗ್ಬಿಟ್ರು . . . ಶವಸಂಸ್ಕಾರಕ್ಕೆ ಏರ್ಪಾಡು ಮಾಡ್ಬೇಕಂತೆ' ಅಂತ ಹೇಳಿ ಹೋದ. ಇವರ್ನ ನೋಡಿದ್ರೆ ಕಲ್ಲುಗುಂಡಾಗಿ ಎದ್ದು ಓಡಾಡ್ತಾ ಇದಾರೆ! ಏನ್ ವಿಚಿತ್ರ ಇದು! (ಯೋಚಿಸುತ್ತ) ಶವ ಸಂಸ್ಕಾರಕ್ಕೆ ಏರ್ಪಾಡು ಅಂತ ಹೇಳಿ ಹೋದ ಮೇಲೆ ಯಾರಾದ್ರೂ ಸತ್ತೇ ಇರಬೇಕು. ಸುಬ್ಬೂ ಏನಾದ್ರೂ ಬಾಯಿತಪ್ಪಿ 'ಅಣ್ಣಾ' ಅನ್ನೋಕೆ ಬದಲಾಗಿ 'ಅಜ್ಜಾ' ಅಂದ್ಬಿಟ್ನೋ! ಇಲ್ಲಾ ನಾನೇ ತಪ್ಪಾಗಿ ಕೇಳಿದ್ನೋ! ಹಾಳು, ನನ್ನ ಬಾಯಲ್ಲೋ ಒಂದೂ ನಿಲ್ಲೋಲ್ಲ . . . ನಾನೂ ದಾರೀಲಿ ಸಿಕ್‌ಸಿಕ್ಕೋರ್ಗೆಲ್ಲಾ 'ಲಕ್ಷ್ಮೀಪತಯ್ಯನವರು ಹೋಗ್ಬಿಟ್ರಂತೆ . . . ಅಯ್ಯೋ ಪಾಪ!' ಅಂತ ಡಂಗುರ ಹೊಡ ದ್ಬಿಟ್ಟೆ. ಏನ್ ಅನಾಹುತ ಇದು! ಇರಲಿ. (ಜೋರಾಗಿ) ಲಕ್ಷ್ಮೀಪತಯ್ಯ ನವರಿಗೆ ನಮಸ್ಕಾರ.

ಲಕ್ಷ್ಮೀಪತಿ—(ಹುಡುಕುತ್ತಿರುವಂತೆಯೇ) ನಮಸ್ಕಾರ . . . ನಮಸ್ಕಾರ, ಶ್ರೌತಿಗಳೇ.

ಶ್ರೌತಿ—(ದುಃಖದ ಸ್ವರದಲ್ಲಿ) ಸಮಾಚಾರ ತಿಳೀತು . . . ಬಹಳ ದುಃಖವಾಯ್ತು.

ಲಕ್ಷ್ಮೀಪತಿ—(ಕಿವುಡು ಕಿವಿಗೆ ಕೈಕೊಟ್ಟು ಆಲಿಸುತ್ತ) ಏನೂಊ? ನನ್ನ ಬೀಗದ ಕೈ ಕಳೆದ ಸುದ್ದಿ ನಿಮ್ಮ ತನಕ ಮುಟ್ಟಿತೆ?

ಶ್ರೌತಿ—(ಕಕ್ಕಾಬಿಕ್ಕಿಯಾಗಿ, ಆದರೂ ತೋರಗೊಡದೆ) ಇದ್ದಕ್ಕಿದ್ದ ಹಾಗೇ ಅಳಿಯಂದಿರು ಹೋಗ್ಬಿಟ್ರಂತೆ. ಬಹಳ ದುಃಖವಾಯ್ತು. ಪಾಪ! ನಮ್ಮ ಸೀತಮ್ಮನೋರಿಗೆ ಇಷ್ಟು ಬೇಗ . . . ಈ ಕಷ್ಟ . . . ದೇವರು ಕೊಡಬಾರದಿತ್ತು.

ಲಕ್ಷ್ಮೀಪತಿ—(ಕಿವುಡಿನಿಂದ ತಪ್ಪಾಗಿ ಕೇಳಿ) ಆ್ಞ . . . ಯಾರು? ಪಾತಮ್ಮನ ಯಜಮಾನ್ರೇ? ಹೋಗ್ಬಿಟ್ರೆ? (ದುಃಖಿಸುತ್ತ) ಅಯ್ಯಯ್ಯೋ . . . ಇನ್ನೇನು ಗತಿ? ನಾ ಮಲಗಿದ್ದೆ . . . ನಂಗೊಂದೂ ಗೊತ್ತಿಲ್ವಲ್ಲ. (ಒಳಬಾಗಿಲ ಕಡೆ ತಿರುಗಿ, ಕೂಗುತ್ತ) ಸೀತೂ, ಸೀತೂ . . . ನಿನ್ನ ತಂಗೀ ಗಂಡ ಹೋಗ್ಬಿಟ್ರಂತಮ್ಮ . . . ಸೀತೂ, ಸೀತೂ (ಒಳಮನೆಯ ಕಡೆ ಹೋಗುವನು.)

ಶ್ರೌತಿ—(ಸ್ವಗತ) ಇದೇನಿದು? ಅರ್ಥವೇ ಆಗೋಲ್ಲ! ಸುಬ್ಬೂ ಬಂದು ಅಜ್ಜಾ ಹೋಗ್ಬಿಟ್ರು ಅಂತಂದ . . . ಇವರ್ನ ಕೇಳಿದ್ರೆ ಪಾತಮ್ಮನ ಯಜಮಾನ್ರು ಅಂತಾರೆ . . . ಒಳ್ಳೇ ಪೀಕಲಾಟಕ್ಕೆ ಬಂತಲ್ಲ.

ಲಕ್ಷ್ಮೀಪತಿ—ಇದೇನು, ಮನೇಲಿ ಇಷ್ಟು ನಿಶ್ಶಬ್ದ? ಆಗಲೇ ಎಲ್ಲಾ ಅಲ್ಲೀಗೇ ಹೋದ್ರೋ ಏನೋ. ನೀವ್ ನಡೀರಿ, ಶ್ರೌತಿಗಳೇ . . . ಬಂದ್ಬಿಟ್ಟೇ.

ಶ್ರೌತಿ—ಸರಿ . . . ಯಾರ್ ಸತ್ತರೆ ನಮಗೇನಂತೆ . . . ಹೊರೋದಂತೂ ಇದ್ದೇ ಇದೆ. (ಶ್ರೌತಿ ಮಡಕೆ ಬಾಳೆಲೆ ಚೊಂಬಿನ ಸಮೇತ ಹೊರಡುವನು.)

ಲಕ್ಷ್ಮೀಪತಿ—(ಮಂಚವನ್ನೆಲ್ಲಾ ಜಾಲಾಡುತ್ತ) ಏನಪ್ಪಾ ಇದೂ . . . ಗಲಾಟೆಲೊಂದು ಗಲಾಟೆ. ಬೀಗ ಬೀಗದ ಕೈ ಸಿಕ್ಕಿದ್ರೆ . . . ಹೋಗಿ ಏನಾಗಿದೆ ಅಂತ ನೋಡಬಹುದು. ಇನ್ನು ನಾನು ಹೊರಟ್ಹೋಗಿ . . . ಬೀಗದ ಕೈ, ಆ ಅಳಿಯ ಮಹಾರಾಯನ ಕೈಗೆ ಸಿಕ್ಬಿಟ್ಟು ಕಬ್ಬಿಣದ ಪೆಟ್ಟಿಗೆ ಖಾಲಿಯಾದ್ರೆ ಏನು ಮಾಡೋದು? ಮೊದಲೇ ಕಲಿಗಾಲ.

[ಒಳಮನೆಯ ಕಡೆಯಿಂದ ಮೆಲುದನಿಯಲ್ಲಿ ಮಾತನಾಡುವ ಶಬ್ದ. ಗುಂಡಪ್ಪ ಸೀತಮ್ಮ ಮರದ ಬೀರುವನ್ನು ಹೊತ್ತು ತರುತ್ತಿದ್ದಾರೆ.]

ಲಕ್ಷ್ಮೀಪತಿ—ಓ, ಮನೇಲೇ ಇದಾರೋ. ಅದೇನೋ ಹೊತ್ಕೊಂಡು ಬರ್ತಿರೋ ಹಾಗಿದೆ.

ಗುಂಡಪ್ಪ—(ಒಳಮನೆಯಲ್ಲಿ) ಮೆಲ್ಲಗೇ . . . ಮೆಲ್ಲಗೇ. ಗೋಡೇಗೆ ತಾಕಿ ಗಾರೆ ಮುರಿದಾತು.

ಸೀತಮ್ಮ—(ಅಲ್ಲಿಂದಲೇ ಅದೇ ತಗ್ಗಿದ ಧ್ವನಿಯಲ್ಲಿ) ಭದ್ರ ಅಂದ್ರೇ. ಬಿದ್ದರೆ ಕಾಲು ಜಜ್ಜಿಹೋಗುತ್ತೆ.

[ಇಬ್ಬರೂ ಜಾಯಿಕಾಯಿಯ ಪೆಟ್ಟಗೆಯೊಂದನ್ನು ಎರಡೂ ಬದಿಯಿಂದ ಹೊತ್ತು ರಂಗಕ್ಕೆ ಪ್ರವೇಶಿಸುವರು. ಗುಂಡಪ್ಪ ಥಟ್ಟನೆ ದೊರೆತ ಮಾವನ ಮುಖ ದರ್ಶನದಿಂದ ಸಿಡಿಲು ಬಡಿದವನಂತಾಗುವನು. ಗಾಬರಿಯಲ್ಲಿ ಬೀರು ಕೈಬಿಟ್ಟು ಕಾಲಿನ ಮೇಲೆ ಬೀಳುವುದು. ಗುಂಡಪ್ಪ ಕುಂಟುಗಾಲನ್ನು ಕುಣಿಸುತ್ತ, ಒಂದೇ ಕ್ಷಣದಲ್ಲಿ ನಡೆದುದೇನೆಂಬುದನ್ನು ಊಹಿಸಿ ಏನು ಮಾಡಲೂ ತೋಚದೆ . . .]

ಗುಂಡಪ್ಪ—ಲೇ ಪಿಶಾಚೀ . . . ಸತ್ತ ಹೆಣ ಎದ್ದುಕೂತಿದೆ, ಕಣೇ !

ಲಕ್ಷ್ಮೀಪತಿ—(ಬೈಗುಳವನ್ನು ಕೇಳಿ, ಅದೇ ಹೊತ್ತಿಗೆ ತನ್ನ ಶಾಲು ಅಳಿಯನ ಮೈಮೇಲೆ ಅಲಂಕರಿಸಿರುವುದನ್ನು ಕಂಡು ರೇಗಿ) ಪಿಶಾಚಿಯಂತೆ ಪಿಶಾಚಿ! ಯಾರಯ್ಯಾ ಪಿಶಾಚಿ? ಹೋಗಿ . . . ಕನ್ನಡೀಲಿ ಮುಖ ನೋಡ್ಕೊಂಡು ಬಾ . . . ನಾನೋ ನೀನೋ ಅಂತ! ಮಲಗಿ ನಿದ್ದೆ ಮಾಡ್ತಿರೋವಾಗ ನನ್ನ ಶಾಲು ಕದ್ದು ಹೊದ್ಕೊಂಡಿದೀಯಲ್ಲ, ನಾಚಿಕೆಯಾಗೋಲ್ವೆ? (ಶಾಲನ್ನು ಕಸಿದುಕೊಳ್ಳಲೆಂದು ಅವನತ್ತ ನುಗ್ಗುವನು.)

ಗುಂಡಪ್ಪ—(ಕುಂಟುಗಾಲಿನಿಂದಲೇ ರಂಗದ ಮೇಲೆ ಒಂದು ಪ್ರದಕ್ಷಿಣೆ ಹಾಕಿ, ಮತ್ತೆ ಮೊದಲಿದ್ದ ಸ್ಥಾನಕ್ಕೆ ಬಂದಾಗ ಶಾಲನ್ನು ಲಕ್ಷ್ಮೀಪತಯ್ಯನ ಕಡೆ ಎಸೆದು, ಹೆಂಡತಿಯ ಹಿಂದೆ ಅವಿತುಕೊಂಡು, ಕೋಪದಿಂದ ಹಲ್ಲು ಕಡಿಯುತ್ತ ನಿಂತಿರುವ ಮಾವನನ್ನು ಕುರಿತು) ಹುಚ್ಚುಚ್ಚಾಗಿ ಆಡ್ತಿದೇ ಕಣೇ . . . ಹೆಣಾ !

ಲಕ್ಷ್ಮೀಪತಿ—ಇದೇನು? ನನ್ನ ಹೆಣಾ ಅಂತಾರೆ ಇವರು? (ಮಗಳಿಗೆ) ಸತ್ತಿರೋನು ನಾನಲ್ಲ ಕಣಮ್ಮಾ . . . ನನ್ನ ಪಾಡಿಗೆ ನಾನು ಗಟ್ಟಿಮುಟ್ಟಾಗಿ ಬದುಕಿಯೇ ಇದೀನಿ. ತೀರಿಹೋದದ್ದು ನಿನ್ನ ತಂಗೀ ಗಂಡ . . . ಪಾತೂ ಯಜಮಾನ್ರು ಹೋಗ್ಬಿಟ್ರಂತೆ. ಈಗ ತಾನೇ ಶ್ರೋತ್ರಿಗಳು ಬಂದು ಹೇಳ್ಬಿಟ್ಟುಹೋದ್ರು. ನನಗೆ ಜೋರು ನಿದ್ರೆ . . . ಮಲಗಿದ್ದೋನು ಈಗ ಎದ್ದೆ.

ಸೀತಮ್ಮ—(ದುಃಖ ಭಯಗಳಿಂದ) ಅಣ್ಣ . . . ಪಾತೂ ಯಜಮಾನ್ರೆ? ಹೋಗ್ಬಿಟ್ರೆ?

ಇನ್ನೇನ್ಗತಿ ಅಂದ್ರೇ? ಅವರ ಪಾಲಿನ ಆಸ್ತಿ ದಕ್ಕಿಹಾಕಬೇಕು ಅಂತ, ದಿಂಬಿನ ಕೆಳಗಿದ್ದ ಜೀಗದ ಕೈ ತೊಗೊಂಡು ಒಡವೇನೆಲ್ಲಾ ಮುಚ್ಚಿಟ್ರಲ್ಲಾ ಅಂದ್ರೇ. ಇನ್ನು ದೆವ್ವವಾಗಿ ಒಂದು ಹಗಲೂ ರಾತ್ರಿ ಕಾಡಿದರೆ ಏನು ಗತಿ ಅಂದ್ರೇ?

ಲಕ್ಷ್ಮೀಪತಿ—ನನ್ನ ಜೀಗದ ಕೈ ಕದ್ದು ಒಡವೇನೆಲ್ಲಾ ಮುಚ್ಚಿಟ್ಟಿದೀರಾ? ಅಯ್ಯಯ್ಯೋ . . . ಕೆಟ್ನಲ್ಲಪ್ಪಾ . . . ಹಾಳ್‌ಮಾಡ್ಬಿಟ್ನಲ್ಲಪ್ಪಾ ಈ ಅಳಿಯಾ ನನ್ನ!

[ಈ ಹೊತ್ತಿಗೆ ಸರಿಯಾಗಿ ಗುಂಡಪ್ಪನ ಜೇಬಿನಲ್ಲಿದ್ದ ಗಡಿಯಾರ ಅಲಾರಂ ಹೊಡೆಯಲು ಆರಂಭಿಸುವುದು. ಗುಂಡಪ್ಪ ಇದ್ದದ್ದೂ ಪೆಚ್ಚಾಗುವನು.]

ಲಕ್ಷ್ಮೀಪತಿ—(ಟೀಪಾಯ್ ಕಡೆ ನೋಡಿ ಅಲ್ಲಿ ಗಡಿಯಾರ ಇಲ್ಲದಿರುವುದನ್ನು ಗಮನಿಸಿ, ಅಲಾರಂ ಶಬ್ದ ಎತ್ತಕಡೆಯಿಂದ ಬರುತ್ತಿದೆಯೆಂದು ಸುತ್ತಲೂ ಆಲಿಸಿ. ಕೊನೆಗೆ ಗುಂಡಪ್ಪನ ಜೇಬಿನ ಮೇಲೆ ಕಣ್ಣುನೆಟ್ಟು) ಓ್ಹ . . . ನನ್ನ ಗಡಿಯಾರಾ? . . . . ನಿಮ್ಮ ಜೇಬ್ನಲ್ಲಿ! ಅದನ್ನೂ ಕದ್ದಾಗಿದೆಯೆ? ಈ ಮನೇಲಿದ್ರೆ ಒಂದು ದಿನ ನನ್ನನ್ನೇ ಕದ್ಬುಡ್ತೀರಿ. ಮೊದಲು ಈ ಮನೆ ಬಿಡ್ಬೇಕು.

[ಶ್ರೌತಿ ಹೊರಗಿನಿಂದ ಬಂದು ಮತ್ತೆ ರಂಗಕ್ಕೆ ಧುಮುಕುವನು.]

ಶ್ರೌತಿ—ಸ್ವಾಮಿನಃ . . . ಪಾತಮ್ಮ, ಪಾತಮ್ಮನ ಯಜಮಾನರೂ ಆರೋಗ್ಯವಾಗಿದ್ದಾರೆ. ಹೊರಟು ಇಲ್ಲೀಗೇ ಬರ್‍ತಿದಾರೆ.

ಲಕ್ಷ್ಮೀಪತಿ—ಅವರೂ ಬದುಕಿದಾರೆಯೆ? (ಅಳಿಯನ ಮುಖಕ್ಕೆ ಮುಖವಿಟ್ಟು, ಹೀಯಾಳಿಸುವ ಧ್ವನಿಯಲ್ಲಿ) ಹಾಗಾದ್ರೆ ಸತ್ತೋರು ಯಾರು ಅಂತಾ? ಇರಲಿ, ನಡೀರಿ ಶ್ರೌತಿಗಳೇ. ಸ್ವಲ್ಪ ಪೋಲೀಸ್‌ಸ್ಟೇಷನ್‌ಗೆ ಹೋಗಿ ಬರಬೇಕಾಗಿದೆ. (ಮಂಚದ ಕೆಳಗೆ ಹುಡುಕುತ್ತಾ) ಎಲ್ಲಿ, ನನ್ನ ಎಕ್ಕಡಾ?

[ಗುಂಡಪ್ಪ ಒಳಮನೆಯ ಕಡೆಯಿಂದ ಓಡಲು ಪ್ರಯತ್ನಿಸುವನು.]

ಸೀತಮ್ಮ—(ಅವನನ್ನು ಹಿಡಿದು ನಿಲ್ಲಿಸಿ) ಕೊಟ್ಬಿಡೀಂದ್ರೆ, ಅವರ ಎಕ್ಕಡಾನ! ಇನ್ನು ಅದೊಂದನ್ನ ಇಟ್ಕೊಂಡು ಏನ್ಮಾಡ್ತೀರಿ?

ಲಕ್ಷ್ಮೀಪತಿ—ಅದನ್ನೂ ಕದ್ದಿದೀರಾ? ಹಾಗಾದ್ರೆ, ಏನು ಕದೀದೆ ಬಿಟ್ಟಿದೀರಿ ಅಂತ. ಇದು ಸಣ್ಣಪುಟ್ಟ ಕಳ್ಳತನವಲ್ಲ . . . ಪಕ್ಕಾ ದರೋಡೆ.

(ಗುಂಡಪ್ಪ ಎಕ್ಕಡ ಕಳಚಿ ಮಾವನತ್ತ ನೂಕುವನು) ನಿಮಗೆ ಸಬ್ ಇನ್ಸ್‌ಪೆಕ್ಟರು, ಇನ್ಸ್‌ಪೆಕ್ಟರು ಸಾಲದು . . . ಪೋಲೀಸ್ ಐಜೀಪೀನೇ ಕರಕೊಂಡು ಬಂದು ತಕ್ಕ ಶಾಸ್ತಿ ಮಾಡಸ್ತೀನಿ. ನಡೀರಿ ಶ್ರೌತಿಗಳೇ. (ಲಕ್ಷ್ಮೀಪತಿ ಹೊರಬಾಗಿಲ ಕಡೆ ನಡೆಯುವನು.)

ಶ್ರೌತಿ–ಅದು ಸರಿ ಸ್ವಾಮಿಗಳ. ಆದರೆ ಈ ಮಡಕೆ, ಬಾಳೆಲೆ, ಬೊಂಬಿನ ಖರ್ಚು ?

[ಶ್ರೌತಿ ಲಕ್ಷ್ಮೀಪತಿಯ ಬೆನ್ನಟ್ಟುವನು. ಗುಂಡಪ್ಪ, ಸೀತಮ್ಮ ಪೆಚ್ಚುಪೆಚ್ಚಾಗಿ ಒಬ್ಬರ ಮುಖವನ್ನೊಬ್ಬರು ಮಿಕಮಿಕನೆ ನೋಡುತ್ತ ನಿಲ್ಲುವರು. ತೆರೆ ಬೀಳುವುದು.]

ತೆರೆ ಬೀಳುವ ಮುನ್ನ . . .

ಇಂಗ್ಲಿಷ್ ನಾಟಕಕಾರ ಸ್ಟ್ಯಾನ್ಲಿ ಹಟನ್ ತಮ್ಮ 'ದಿ ಡಿಯರ್ ಡಿಪಾರ್ಟೆಡ್' ಮತ್ತು 'ದಿ ಮಾಸ್ಟರ್ ಅಫ್ ದಿ ಹೌಸ್' ಎಂಬ ಪರಸ್ಪರ ಪೂರಕವಾದ ನಾಟಕಯುಗಳದಲ್ಲಿ ಒಂದು ಸ್ವಾರಸ್ಯವಾದ ಪ್ರಯೋಗ ಮಾಡಿದ್ದಾರೆ: ಒಬ್ಬ ಮನುಷ್ಯ, ಅವನು ಸತ್ತಿಲ್ಲದಿದ್ದರೂ ಸತ್ತಿದ್ದಾನೆಂದು ಜನ ತಪ್ಪು ತಿಳಿದಾಗ ಉಂಟಾಗುವ ಪರಿಣಾಮವನ್ನು ಮೊದಲಿನದರಲ್ಲೂ, ಸತ್ತಿದ್ದು ಸತ್ತಿಲ್ಲವೆಂದುಕೊಂಡಾಗ ಆಗುವುದನ್ನು ಎರಡನೆಯದರಲ್ಲೂ ಚಿತ್ರಿಸಿದ್ದಾರೆ. ಕಂಡಂತೆಯೇ ಮೊದಲನೆಯದರಲ್ಲಿ ಉಂಟಾಗುವುದು ಹರ್ಷ, ನಗೆ; ಎರಡನೆಯದರ ಪರಿಣಾಮ ಭೀಕರ; ರುದ್ರ.

'ದಿ ಡಿಯರ್ ಡಿಪಾರ್ಟೆಡ್' ನಾಟಕವನ್ನು ಮೊದಲ ಸಲ ಓದಿದಾಗ ಅದರ ಸನ್ನಿವೇಶವನ್ನು ಕನ್ನಡದ ವಾತಾವರಣಕ್ಕೆ ಹೊಂದಿಸಿದರೆ ಅದು ನಮ್ಮ ಪ್ರಹಸನಪ್ರಿಯತೆಗೆ ರುಚಿಸಬಹುದೆನಿಸಿತು. ಬಹುಕಾಲದ ಮೆಲುಕಿನ ಮೇಲೆ ಕೊನೆಗೊಂದು ದಿನ ಗೆಳೆಯ ಶ್ರೀ ಬಿ. ಜಿ. ರಾಮನಾಥರ ಒತ್ತಾಯದಿಂದ ವಿಚಾರ ಕೃತಿಗಿಳಿಯಿತು. ಸಂದರ್ಭ, ದಿ|| ಗಮಕಿ ಸಂಪತ್ಕುಮಾರಾಚಾರ್ಯರ ದಿನಾಚರಣೆಯಂದು ಆಡಲೆಂದು. ಆಡಿದುದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ, ೧೯೫೨ ರಲ್ಲಿ. ನಾಟಕದ ಆಗಿನ ಹೆಸರು 'ಆಸ್ತಿಗೇಕಿಷ್ಟು ಅವಾಂತ್ರ.'

ಸಾಯದ ಒಬ್ಬನನ್ನು ಸತ್ತಿದ್ದಾನೆಂದುಕೊಂಡು ಅವನ ಆಸ್ತಿಯನ್ನು ಲಪಟಾಯಿಸಲು ಅವನ ಮಗಳು-ಅಳಿಯಂದಿರು ಹೂಡುವ ಸಂಚಿನ ಸನ್ನಿವೇಶಕ್ಕಷ್ಟೇ ಇದು ಮೂಲನಾಟಕಕ್ಕೆ ಋಣಿ. ಉಳಿದ ಬೆಳವಣಿಗೆ, ಮಾತುಕತೆ, ಪಾತ್ರೀಕರಣ, ಉಪಸನ್ನಿವೇಶಗಳು, ಒಟ್ಟಿನ ಪರಿಣಾಮ—ಇವೆಲ್ಲವೂ ನನ್ನದೇ; ಸ್ವತಂತ್ರ. ಇದು ಅನುವಾದವಲ್ಲ, ರೂಪಾಂತರವೂ ಅಲ್ಲ; ಬರಿಯ ಪ್ರೇರಣೆ ಅಷ್ಟೆ.

ಬರೆದು ೧೨ ವರ್ಷಗಳಾದರೂ ನನ್ನ ಅನಾಸಕ್ತಿಯಿಂದಾಗಿ ಇದು ಅಚ್ಚಾಗದೆ ಉಳಿದಿತ್ತು. ಈಗ ದೆಹಲಿಯ ಕನ್ನಡ-ಭಾರತಿಯ ಗೆಳೆಯರು ಇದನ್ನು ಅಚ್ಚಿಡುತ್ತಿರುವುದೇ ಅಲ್ಲದೇ ಕ್ರೋಧಿ ಸಂವತ್ಸರದ ಯುಗಾದಿಯ ಶುಭೋತ್ಸವದಲ್ಲಿ ರಾಜಧಾನಿಯ ಕನ್ನಡಿಗರೆದುರು ಆಡಿ ತೋರಿಸುತ್ತಿದ್ದಾರೆ. ಅವರೆಲ್ಲರಿಗೂ, ಅದರಲ್ಲೂ ನಾಟಕದಲ್ಲಿ ನನ್ನೊಡನೆ ಪಾತ್ರ ವಹಿಸಿರುವ ಶ್ರೀ ಎಂ. ವಿ. ನಾರಾಯಣರಾವ್ ('ಲಕ್ಷ್ಮೀಪತಯ್ಯ'), ಶ್ರೀ ಜಿ. ಪಿ. ವೆಂಕಟರಾಮು ('ಸುಬ್ಬು'), ಶ್ರೀ ಎಂ. ಆರ್. ವಿ. ಸುಬ್ಬಯ್ಯ ('ಶೌರಿ'), ಶ್ರೀಮತಿ ಕಮಲಿನಿ ಬಾಲುರಾವ್ ('ಸೀತಮ್ಮ') ಹಾಗೂ ಶ್ರೀ ಯು. ಪ್ರಭಾಕರರಾವ್ (ರಂಗಸಜ್ಜಿಕೆ) ಅವರ ಒಲವಿನ ಸಹಕಾರಕ್ಕೆ ನನ್ನ ಕೃತಜ್ಞತೆಗಳು.

ನವದೆಹಲಿ,
ಕ್ರೋಧಿಯ ಚೈತ್ರ ಪಾಡ್ಯಮಿ.

ಶಾ. ಬಾಲುರಾವ್.

ಇಂಗ್ಲಿಷ್ ನಾಟಕವೊಂದರ ಸ್ವಾರಸ್ಯಪೂರ್ಣ ಸನ್ನಿವೇಶವನ್ನು ಕನ್ನಡದ ಕಿಟಕಿಯ ಮೂಲಕ ಇಣಿಕಿನೋಡಿದಾಗ ಕಾಣಿಸಿಕೊಂಡ ಚಿತ್ರ, ಈ ಚಿಕ್ಕ ನಾಟಕ. ಕೈಗೆ ಬಂದ ತುತ್ತು ಬಾಯಿ ಮುಟ್ಟುವ ಮೊದಲೇ ಜಾರಿ ನೆಲಕ್ಕುರುಳುವುದು ಮಾನವ ಜೀವನದ ಸಾಮಾನ್ಯ ಅನುಭವ. ಅದರ ಪರಿಣಾಮಕಾರಿಯಾದ ಒಂದು ರೂಪಣ ಈ ಪ್ರಹಸನದಲ್ಲಿದೆ.

ಒಳಗೆ ಹುಲಿ, ನರಿ, ಹಸು, ಜಿಂಕೆಗಳ ನಡತೆಯಿಟ್ಟು, ಮೇಲೆ ಮನುಷ್ಯರ ಮುಖವಾಡ ತೊಟ್ಟು ಓಡಾಡುವ ನಮ್ಮ ನೆರೆಹೊರೆ ಈ ನಾಟಕದಲ್ಲಿ ಯಥಾವತ್ತಾಗಿ ಬಿಂಬಿತವಾಗಿರುವುದಲ್ಲದೇ, ಅವರ ಮೈಸೂರಿನ ಆಡುಮಾತಿನ ಸೊಗಸು ಇದರಲ್ಲಿ ಒಡಮೂಡಿ ಬಂದಿದೆ. ಅಂತೆಯೇ ಅವರು ತಮ್ಮ ನೀತಿ ನಡವಳಿಕೆಗಳಿಂದ ನಮ್ಮಲ್ಲಿ ಉಕ್ಕಿಸುವ ಹರ್ಷ, ಹಾಸ್ಯ, ಅನುಕಂಪಗಳಂತಹ ವಿಧವಿಧ ಭಾವನೆಗಳೆಲ್ಲವನ್ನೂ ಈ ನಾಟಕ ಹಿಡಿದಿಟ್ಟಿದೆ.

ಒಂದು ಹೆಣ್ಣು, ನಾಲ್ಕು ಗಂಡು—ಹೀಗೆ ಕೇವಲ ಐದೇ ಪಾತ್ರಗಳಿಂದ ಕೂಡಿ, ಆಡಲು ಸರಳವೂ ಸುಲಭವೂ ಆಗಿದ್ದು, ನೋಟಕ—ಓದುಗರಿಬ್ಬರಿಗೂ ಒಂದು ಗಂಟೆಯ ಕಾಲ ತಂಪಾದ ತಿಳಿನಗೆಯ ತುಂಗಾಸ್ನಾನ ಮಾಡಿಸುವ ಈ ಏಕಾಂಕವನ್ನು ಕ್ರೋಧಿ ಸಂವತ್ಸರದ ಯುಗಾದಿಯಂದು ದೆಹಲಿಯ ಕನ್ನಡ-ಭಾರತೀ ತನ್ನ ಚೊಚ್ಚಲು ಉಡುಗೊರೆಯಾಗಿ ಕನ್ನಡ ರಸಿಕರ ಕೈಗಿಡುತ್ತಿದೆ.

ಬೆಲೆ : ಒಂದು ರೂಪಾಯಿ.